SRI M. VEERAPPA MOILY.—I know very well you have got powers to stay. They cannot grant. Please stay the grant. Look into the matter. After all you have got to try to go into it. Otherwise we have to say that you are involved in it.

ಶ್ರೀ ಎಂ. ಚಂದ್ರಶೇಖರ್.—ಇಲ್ಲಿ ಸರ್ಕಾರ.ಮಧ್ಯೆ ಪ್ರವೇಶ ಮಾಡಲು ಅಧಿಕಾರವಿದ್ದರೆ ಖಂಡಿತವಾಗಿ ಮಾಡುತ್ತೇವೆ.

ಶ್ರೀ ಎಂ. ವೀರಪ್ಪಮೊಯ್ಲಿ.—ನಿಮಗೆ ಅಧಿಕಾರ ಇಲ್ಲದಿದ್ದರೆ ಇನ್ನೂ ಯಾರಿಗೆ ಇದೆ.

ಶ್ರೀ ಎಂ. ಚಂದ್ರಶೇಖರ್.—ಅಧಿಕಾರವಿದ್ದರೆ ಮಾಡುತ್ತೇವೆಂದು ಈಗಾಗಲೇ ಹೇಳಿದ್ದೇನೆ.

DISCUSSION FOR SHORT DURATION UNDER RULE-68

Reg—Yevoor murder case in Shahapur Taluk, Gulbarga district

ಶ್ರೀ ಎ. ಎಸ್ ಆಚಾರ್ಯ—(ಉಡುಪಿ) ಸನ್ಮಾನ್ಯ ಅಧ್ಯಕ್ಷರೇ, ಓರೆನೇ ನಿಯಮದ ಪ್ರಕಾರ ನಾನು ಮತ್ತು ಶ್ರೀ ಗೋವಿಂದ ಪಿ. ಒಡೆಯರಾಜ್ ಅವರು ಈ ವಿಷಯದ ಮೇಲೆ ಅಲ್ಪಕಾಲಾವಧಿ ಚರ್ಚೆ ಮಾಡಲು ತಮ್ಮ ಅನುಮತಿ ಪಡೆದಿದ್ದೇವೆ. ಈ ಹಿಂದೆ ಇದೇ ಸದನದಲ್ಲಿ ನಿಯಮ ೩೩ರ ಕೆಳಗೆ ಈ ವಿಷಯ ಎರಡು ಸಲ ಚರ್ಚೆಗೆ ಬಂತು. ಆಗ ತಾವೇ ಈ ವಿಷಯದ ಮೇಲೆ ವಿಶೇಷ ಚರ್ಚೆಗೆ ನೋಟೀಸ್ ಕೊಡಿ ಎಂದು ತಾವೇ ಅಪ್ಪಣೆ ಕೊಡಿಸಿದ ಪ್ರಕಾರ ಇವೊತ್ತು ನಿಯಮ ೮೦ರ ಪ್ರಕಾರ ಪ್ರಸ್ತಾಪ ಮಾಡುತ್ತಿದ್ದೇವೆ. ಗುಲ್ಬರ್ಗ ಜಿಲ್ಲೆಯ ಶಹಪುರ ತಾಲ್ಲೂಕ್‌ನಲ್ಲಿ ಇವೊತ್ತು ಕಾನೂನು ಸುವ್ಯವಸ್ಥೆ ಕಾಪಿಡು ಬಿದ್ದಿರುವುದಕ್ಕೆ ಕಾರಣವೇನೆಂದರೆ, ಅಲ್ಲಿಯ ಪೋಲೀಸರು ರಾಜಕೀಯ ಹಸ್ತಕ್ಷೇಪಕ್ಕೆ ಒಳಗಾಗಿ ಅನೇಕ ನಿರಪರಾಧಿ ಜನರನ್ನು ಅನೇಕ ರೀತಿಯ ಹಿಂಸೆಗೆ ಗುರಿಪಡಿಸುತ್ತಿದ್ದಾರೆ. ಇಂತಹ ಅನೇಕ ಪ್ರಕರಣಗಳಲ್ಲಿ ಏವೂರು ಕೊಲೆ ಪ್ರಕರಣವೂ ಸಹ ಒಂದಾಗಿದೆ. ತಾ॥ ೬-೯-೧೯೮೩ರಲ್ಲಿ ಶ್ರೀ ಸಿದ್ದಣ್ಣ ಎಂಬುವರು ಏವೂರ್ ಎಂಬಲ್ಲಿ ಕೊಲೆಗೀಡಾದರು. ನಂತರ ಈ ಪ್ರಕರಣ ಅಲ್ಲಿನ ಕಂಬಾವಿ ಪೋಲೀಸ್ ಸ್ಟೇಷನ್‌ನಲ್ಲಿ ದಾಖಲಾಯಿತು. ಇವರ ಕೊಲೆ ಜನರು ಯಾರೂ ಇಲ್ಲದ ಜಾಗದಲ್ಲಿ ಆಗಿಲ್ಲ. ಇವರ ಕೊಲೆ ಬಸ್ಟಾಂಡಿನಲ್ಲಿ ಆಗಿದೆ. ಇವರ ಕೊಲೆ ನಡೆದಿದ್ದನ್ನು ಅನೇಕ ಜನರು ನೋಡಿದ್ದಾರೆ. ಈ ರೀತಿ ನೋಡಿದಂಥ ಜನರಿಗೆ ಕೊಲೆ ಯಾರು ಮಾಡಿದ್ದಾರೆಂಬುದು ಗೊತ್ತಿದೆ. ಇಂತಹ ಒಂದು ಸಂದರ್ಭ ವಿದ್ದರೂ ಸಹ, ನಿಜವಾದ ಕೊಲೆಗಾರರನ್ನು ಪೋಲೀಸರು ಹಿಡಿಯದೆ ಬೇರೆ ೧೪ ಜನ ನಿರಪರಾಧಿಗಳ ಮೇಲೆ ಕೇಸ್‌ಗಳನ್ನು ಹಾಕಿದ್ದಾರೆ. ಈ ೧೪ ಜನರ ಪೈಕಿ ಭೀಮನಗೌಡರು ಸಹ ಒಬ್ಬರಾಗಿದ್ದಾರೆ. ಇವರಂ ಅದೇ ತಿಂಗಳ ೪ನೇ ತಾರೀಖಿನಿಂದ ಹಿಡಿದು ೭ನೇ ತಾರೀಖಿನವರೆಗೆ ಸಿಂಧಗಿ ಆಸ್ಪತ್ರೆಯಲ್ಲಿ ಅಡ್ಮಿಟ್ ಆಗಿದ್ದರು. ಕೊಲೆ ನಡೆದಿದ್ದು ೭ನೇ ತಾರೀಖಿನ ದಿವಸ. ಅದರೂ ಇವರ ಮೇಲೆ ಕೇಸ್ ಹಾಕಿದ್ದಾರೆ. ಈ ೧೪ ಜನರಲ್ಲಿ ಶ್ರೀ ಗೌಡಪ್ಪಗೌಡ ಎಂಬುವರು ಸಹ ಸೇರಿದ್ದಾರೆ. ಇವರು ಕೊಲೆ ನಡೆದ ದಿವಸ, ಇವರ ಚಿಕ್ಕಪ್ಪ ತೀರಿ ಹೋದ ಕಾರಣದಿಂದ ಊರಿನಲ್ಲಿರದೆ ಹೊರಗಡೆ ಇದ್ದರು. ಇದು ಅಲ್ಲಿನ ಜನರಿಗೂ ಇದಂ ಅಲ್ಲಿನ ಜನರಿಗೂ ಸಹ ಗೊತ್ತು. ಆದರೂ ಇವರ ಮೇಲೆ ಕೇಸ್ ಹಾಕಿದ್ದನ್ನು ನೋಡಿ ಅಲ್ಲಿಯ ಜನರು ಬಹಳ ಆಶ್ಚರ್ಯ ವ್ಯಕ್ತಪಡಿಸಿದ್ದಾರೆ. ಈ ಕೊಲೆ ಪ್ರಕರಣದಲ್ಲಿ ನಿಜವಾಗಿಯೂ ಯಾರು ಒಳಗಿದ್ದಾರೆಂಬ ಬಗ್ಗೆ ಗುಲ್ಬರ್ಗ ಜಿಲ್ಲೆಯ ವಕೀಲರು ಅಲ್ಲಿನ ಜನರ ಪರವಾಗಿ ಮುಖ್ಯಮಂತ್ರಿಗಳಿಗೆ ಅರ್ಜಿ ಕೊಟ್ಟಿದ್ದಾರೆ. ಅಲ್ಲಿನ ಪೋಲೀಸರು ಆಡಳಿತ ಪಕ್ಷದ ಸದಸ್ಯರ ಹಸ್ತಕ್ಷೇಪಕ್ಕೆ ಒಳಗಾಗಿರುವುದರಿಂದ, ನ್ಯಾಯಯುತವಾದಂಥ ತನಿಖೆ ನಡೆಸಿ ನಿಜವಾದಂಥ ಅಪರಾಧಿಗಳನ್ನು ಕಂಡು ಹಿಡಿದು ಕೇಸ್ ಹಾಕಬೇಕೆಂದು ತಾರೀಖು ೧೧-೧೧-೧೯೮೩ರಂದು ಅರ್ಜಿ ಕೊಟ್ಟಿದ್ದಾರೆ. ಇದಾದ ನಂತರ ಮತ್ತೆ ತಾ॥ ೨೬-೧೨-೧೯೮೩ರಂದು ನಡೆದಂಥ ಎಲ್ಲ ವಿವರಗಳನ್ನು ಒಳಗೊಂಡಂತಹ ಮತ್ತೊಂದು ಮನವಿಯನ್ನು ಅದೇ ಜಿಲ್ಲೆಯ ಸಚಿವರಾದಂಥ ಶ್ರೀ ವಿಶ್ವನಾಥರೆಡ್ಡಿ ಅವರ ನೇತೃತ್ವದಲ್ಲಿ ಸ್ಥಳೀಯ ಜನರು ಮುಖ್ಯಮಂತ್ರಿಗಳಿಗೆ ಅರ್ಪಿಸಿದ್ದಾರೆ. ಇದು ಏವೂರು ಸಿದ್ದಣ್ಣ ಕೊಲೆ ಪ್ರಕರಣ ಎಂದು ಹೆಸರಾಗಿದೆ. ಈ ಪ್ರಕರಣದಲ್ಲಿ ನಿರಪರಾಧಿ ಜನರನ್ನು ದಸ್ತಗಿರಿ ಮಾಡಿರುವ ಕಾರಣದಿಂದ ಇದರ ತನಿಖೆಯನ್ನು ಸಿ.ಒ.ಡಿ.ಗೆ ಒಪ್ಪಿಸಬೇಕೆಂದು ಅಲ್ಲಿನ ಸ್ಥಳೀಯ ಜನರು ಮುಖ್ಯಮಂತ್ರಿಗಳಿಗೆ ಮನವಿಯನ್ನು ಕೊಟ್ಟಿದ್ದಾರೆ. ಇಷ್ಟೆಲ್ಲಾ ನಡೆದ ನಂತರ ತಾ॥ ೧೪-೧-೧೯೮೪ರಂದು ಈ ಬಗ್ಗೆ ಸಿ.ಒ.ಡಿ. ತನಿಖೆಯಾಗಬೇಕೆಂದು ಮುಖ್ಯಮಂತ್ರಿಗಳು ಹೇಳಿದ ನಂತರ ಆಜ್ಞೆ ಹೊರಡಿಸಿದರು. ಆದರೆ ವಿಷಾದದಿಂದ ಒಂದು ಮಾತನ್ನು

ಹೇಳಬೇಕಾಗಿದೆ. ಏನೆಂದರೆ, ಇಂತಹ ಒಂದು ಆಜ್ಞೆಯನ್ನು ಹೊರಡಿಸಿದ ನಂತರ ಮತ್ತೆ ಮುಖ್ಯಮಂತ್ರಿಗಳು ಏನು ಹೇಳಿದರೆಂದರೆ, ಈ ಕೇಸ್ ನಡೆದು ೬೦ ದಿವಸಗಳ ಮೇಲಾಗಿದೆ. ಯಾವುದೇ ಕೇಸ್ ಆಗಲಿ, ಅದನ್ನು ೬೦ ದಿವಸಗಳಲ್ಲಿ ಪೋಲೀಸರು ತನಿಖೆ ಮಾಡಬೇಕೆಂದು ನಿಯಮವಿದೆ. ಅದರ ಪ್ರಕಾರ ಈ ಕೇಸ್‌ನಲ್ಲಿ ತನಿಖೆ ಕೆಲಸ ಮುಗಿದು ಚಾರ್ಜ್‌ಷೀಟ್ ಹಾಕುವ ಹಂತದಲ್ಲಿರುವ ಕಾರಣ, ಪುನಃ ಇದೆ ಸಿ.ಓ.ಡಿ.ಗೆ ಒಪ್ಪಿಸುವುದು ಬೇಡ ಎಂಬ ಅಭಿಪ್ರಾಯಕ್ಕೆ ಬಂದಿದ್ದೇವೆ ಎಂದು ಹೇಳಿದರು. ಇದನ್ನೇ ಕಾರಣದ ಮೇಲೆ ತಾ॥ ೧೪-೧-೧೪ ರಂದು ಹೊರಡಿಸಿದ್ದ ಆಜ್ಞೆಯನ್ನು ತಾ॥ ೧೬-೧-೧೯೬೪ ರಂದು ಕೈ ಬಿಟ್ಟರು. ಇದೇ ಪ್ರಕರಣದ ಬಗ್ಗೆ ನಾನು ಕಳೆದ ಫೆಬ್ರವರಿ ೬ರಂದು ಇಲ್ಲಿ ಪ್ರಸ್ತಾಪ ಮಾಡಿ, ಇದರಲ್ಲಿ ನಿರಪರಾಧಿಗಳು ಸೇರುವ ಭೀತಿ ಇರುವ ಕಾರಣ ಇದನ್ನು ಸಿ.ಓ.ಡಿ.ಗೆ ಒಪ್ಪಿಸಬೇಕೆಂದು ಕೇಳಿದ್ದೆ. ಶಹಾಪುರ ತಾಲ್ಲೂಕಿನ ಪೋಲೀಸರ ಮೇಲೆ ಕೆಲವು ರಾಜಕಾರಣಿಗಳು ತಮ್ಮ ಸ್ವಾರ್ಥಕ್ಕಾಗಿ ಒತ್ತಡ ತರುವುದರಮೂಲಕ ಇದರಲ್ಲಿ ಕೆಲವು ನಿರಪರಾಧಿಗಳು ಸೇರಬೇಕಾಗಿ ಬಂದಿದೆ ಎಂದು ಆ ದಿನ ಬೆಳಿಗ್ಗೆ ೧೧ ಗಂಟೆ ಸಮಯದಲ್ಲಿ ಪ್ರಸ್ತಾಪ ಮಾಡಿದ್ದೆ. ಮಾನ್ಯ ಅಧ್ಯಕ್ಷರೇ, ಒಂದು ವಿಚಾರವನ್ನು ಈ ಸಭೆಯ ಮುಂದೆ ಪ್ರಸ್ತಾಪ ಮಾಡಲು ತಾವು ಅನುಮತಿ ಕೊಡಬೇಕು. ಏನೆಂದರೆ, ಆ ದಿನ ನಾನು ಬೆಳಿಗ್ಗೆ ಇಲ್ಲಿ ಪ್ರಸ್ತಾಪ ಮಾಡಿದ ನಂತರ ಅದೇ ದಿನ ಸಾಯಂಕಾಲ ಅಲ್ಲಿನ ಪೋಲೀಸರು ಕೆಲವು ನಿರಪರಾಧಿ ಜನರನ್ನು ಸಹ ಈ ಕೇಸ್‌ನಲ್ಲಿ ಸೇರಿಸಿ ಚಾರ್ಜ್‌ಷೀಟ್ ಸಲ್ಲಿಸಿದರು.

ಅಂದರೆ ಈ ಒಂದೊಂದು ಘಟನಾವಳಿಯಲ್ಲೂ ಸಹ ಎಷ್ಟು ರಾಜಕೀಯ ಹಸ್ತಕ್ಷೇಪ ಯಾವ ಪ್ರಮಾಣದಲ್ಲಿ ನಡೆದಿದ ಎನ್ನುವಂಥಾದ್ದನ್ನು ಯೋಚನೆ ಮಾಡಬೇಕಾಗಿದೆ. ಪುನಃ ೯ನೇ ತಾರೀಖಿಂ.....

ಅಧ್ಯಕ್ಷರು.—ಚಾರ್ಜ್ ಶೀಟ್ ಹಾಕಿದ ಮೇಲೆ ಅದರ ಬಗ್ಗೆ ಇಲ್ಲಿ ಪ್ರಸ್ತಾಪ ಮಾಡಿದರೆ ಸಬ್ ಜ್ಯುಡಿಶಿಯಸ್ ಆಗುವುದಿಲ್ಲವೇ ?

ಶ್ರೀ ವಿ. ಎಸ್. ಆಚಾರ್ಯ.—ಸಬ್ ಜ್ಯುಡಿಶಿಯಸ್ ಆಗುವುದಿಲ್ಲ ಎನ್ನುವುದು ಗೊತ್ತಿದೆ. ಚಾರ್ಜ್ ಶೀಟ್ ಸಲ್ಲಿಸಿದ ನಂತರ ಸಿ.ಓ.ಡಿ ತನಿಖೆ ಮಾಡುವುದಕ್ಕೆ ಬರುವುದಿಲ್ಲ ಎನ್ನುವ ವಿಚಾರವನ್ನು ಹೇಳಿದರು. ಆದರೆ ಇವತ್ತು ಪುನಃ ಆ ವಿಷಯವನ್ನು ಸ್ವಲ್ಪ ಕಾಲಾವಧಿಯ ಚರ್ಚೆಯ ಮೂಲಕ ಕೆಲವೊಂದು ವಿಷಯಗಳನ್ನು ಪ್ರಸ್ತಾಪ ಮಾಡಿ ಹೇಳುವುದಕ್ಕೆ ಇಷ್ಟಪಡುತ್ತಿದ್ದೇನೆ. ಬರೀ ಭೀಮಣ್ಣ ಎನ್ನುವವರ ಕೊಲೆ ಪ್ರಕರಣ ಮಾತ್ರವಲ್ಲ. ಭೀಮಣ್ಣ ಗೌಡ ಮತ್ತು ಗೌಡಪ್ಪಗೌಡರವರನ್ನೂ ಸಹ ಇನ್‌ವಾಲ್ವ್ ಮಾಡಿದ್ದಾರೆ. ೧೯೭೪ರಿಂದಲೂ ಕೆಲವು ಜನರು ರಾಜಕೀಯವಾಗಿ ದ್ವೇಷ ಸಾಧಿಸಿಕೊಂಡು ಅವರು ಅಲ್ಲಿ ಇರಲಿಕ್ಕೆ ಬಿಡಬಾರದು ಎನ್ನುವ ದೃಷ್ಟಿಯಿಂದ ಗೂಳಿ ಯಂಕಪ್ಪ ಕೊಲೆ ಕೇಸ್‌ನಲ್ಲಿ ಪೋಲೀಸ್ ಕಂಬಾವಿ ಪೋಲೀಸ್‌ನವರು ಪುನಃ ಈ ಭೀಮಣ್ಣ ಗೌಡವಂತಿತರ ೨೭ ಜನರ ಮೇಲೆ ಚಾರ್ಜ್‌ಷೀಟನ್ನು ಹಾಕಿದರು. ಅನಂತರ ಕೆಲವು ಜನ ಆಗಿದ್ದ ಮುಖ್ಯಮಂತ್ರಿಗಳಾದ ಶ್ರೀ ದೇವರಾಜ್ ಅರಸ್‌ರವರನ್ನು ಭೇಟಿ ಮಾಡಿ ಕೇಳಿಕೊಂಡಾಗ, ಆಗ ಅವರು ಚಾರ್ಜ್ ಷೀಟ್ ಹಾಕಿದ್ದರೂ ಸಹ ಅದನ್ನು ವಾಪಸ್ಸು ತೆಗೆದುಕೊಂಡು ಸಿ.ಓ.ಡಿ.ಗೆ ಒಪ್ಪಿಸಿದರು. ಸಿ.ಓ.ಡಿ.ಯವರು ತನಿಖೆ ಮಾಡಿ ಏನು ಹೇಳಿದ್ದಾರೆ ಎಂದರೆ ಇದರಲ್ಲಿ. During the course of investigation conducted by the COD after varifying the investigation already done by the local police for no offence of criminal conspiracy and abetment have been proved against the accused persons Bheemanna Gowda, aged 45 years and Gowdappa Gowda of Sindhanoor...ಇವರಿಬ್ಬರನ್ನು ಹೊರತು ಪಡಿಸಬೇಕೆಂದು ಹೇಳಿದ್ದಾರೆ. ಸನ್ಮಾನ್ಯ ಅಧ್ಯಕ್ಷರೇ ಇಷ್ಟು ಮಾತ್ರವಲ್ಲ. ೧೯೭೬ನೇ ಇಸವಿಯಲ್ಲಿ ಕೇಸ್ ನಂ. ೧೪೭೬, ಒಬ್ಬ ಲಂಬಾಣಿಯ ಕೊಲೆಯಾಯಿತು. ಆ ಕೇಸ್‌ವಲ್ಲೂ ಸಹ ಲಿಂಗಣ್ಣ ಗೌಡ ಮತ್ತು ಗೌಡಪ್ಪ ಗೌಡರವರನ್ನು ಸೇರಿಸಿದರು. ಇಡೀ ಊರು ಊರಿಗೇ ಗೊತ್ತಿತ್ತು. ಆದರೂ ಸಹ ಅವರನ್ನು ಆ ಕೇಸ್‌ನಲ್ಲಿ ಇನ್‌ವಾಲ್ವ್ ಮಾಡಿದ್ದರು. ಜಡ್ಜ್‌ಮೆಂಟ್ ಬಂದಾಗ ಅವರಿಬ್ಬರನ್ನು ತಪ್ಪಾಗಿ ಸೇರಿಸಿದ್ದಾರೆ. ಅದು ಸರಿಯಲ್ಲವೆಂದು ಹೇಳಿ ಅವರನ್ನು ಬಿಡುಗಡೆ ಮಾಡಿಮತ್ತೆ ಕೌಂಟರ್ ಆಗಿ ಯಾರು ಸಿದ್ದಣ್ಣ ಎನ್ನುವವರ ಗ್ರೂಪ್ ಇದೆ ಅವರವರು ದ್ವೇಷಿಗಳು ಎನ್ನುವ ಬಗ್ಗೆ ಕಾಮೆಂಟ್ಸ್ ಬಂದದ್ದು ಇದೆ. ಮೊನ್ನೆ ಗುಲ್ಬರ್ಗ ಪತ್ರಿಕಾ ಕರ್ತರ ಕೊಲೆ ಸಂಬಂಧವಾಗಿ ಯಾವ ರೀತಿಯಾಗಿ ಪೋಲೀಸಿನವರಿಂದ ತನಿಖೆ ನಡೆಯಿತೋ ಆ ರೀತಿಯಾಗಿ ತನಿಖೆ ನಡೆದರೆ ನ್ಯಾಯ ಸಿಕ್ಕಿಯೇ ಇಲ್ಲ. ಅಲ್ಲಿ ಕೆಲವರು ಪೋಲೀಸಿನವರ ಮೇಲೆ ರಾಜಕೀಯ ಹಸ್ತಕ್ಷೇಪವನ್ನು ಬೀರುತ್ತಿದ್ದಾರೆ.

ಸರ್ಕಾರದ ಪಕ್ಷದಲ್ಲಿರುವಂಥಾ ಪ್ರಭಾವಿ ಒಬ್ಬರು ಅಲ್ಲಿ ಹಸ್ತಕ್ಷೇಪವನ್ನು ನಡೆಸುತ್ತಿದ್ದಾರೆ ಎಂದು ಹೇಳುವಂಥಾದ್ದು ನಮಗೆ ತಿಳಿದು ಬಂದಿದೆ. ಸನ್ಮಾನ್ಯ ಅಧ್ಯಕ್ಷರೇ, ಇದರ ಮಧ್ಯದಲ್ಲಿ ಜ್ಞಾನಮ್ಮ ಎನ್ನುವವರು ಮಾಣಿಕ್‌ರಾವ್ ದರ್ಶನಾಪುರ ಎನ್ನುವವರು ಯಾರಿದ್ದಾರೆ ಇವರು ಸರ್ಕಾರದ ಮುಖ್ಯ ಸಚೇತಕರಾದ ಅಣ್ಣನ ಹೆಂಡತಿ.

ಶ್ರೀ ಬಾಪುಗೌಡ ದರ್ಶನಾಪುರ್—ಅಧ್ಯಕ್ಷರೇ, ನನ್ನ ಹೆಸರನ್ನು ಇಲ್ಲಿ ಪ್ರಸ್ತಾಪ ಮಾಡಿ ಹೇಳಿರುವುದರಿಂದ ಇದರ ಬಗ್ಗೆ ಹೇಳಲು ನನಗೂ ಸಹ ಸಾಕಷ್ಟು ಕಾಲಾವಕಾಶವನ್ನು ಕೊಡಬೇಕಾಗುತ್ತದೆ. ಗುಲ್ಬರ್ಗ ನನ್ನ ವಂತ ಕ್ಷೇತ್ರ. ಅಲ್ಲಿ ನಡೆದಂಥ ಪ್ರಕರಣದ ಬಗ್ಗೆ ಬಿ.ಜೆ.ಪಿ. ಮಂದಿಗೆ ಇದರಲ್ಲಿ ವಿನು ಆಸಕ್ತಿ ಇದೆ ಎಂಬುದು ಗೊತ್ತಾಗುತ್ತಿಲ್ಲ. ಅವರು ಪಕ್ಷದವರು ಅಲ್ಲಿ ಯಾರೂ ಇಲ್ಲ ಅಂಥಾದ್ದರಲ್ಲಿ ಅವರು ಸುಮಾರು ೪–೫ ಸಾರಿ ಇದರ ಬಗ್ಗೆ ಈ ಸದನದಲ್ಲಿ ಪ್ರಸ್ತಾಪ ಮಾಡುತ್ತಿದ್ದಾರೆ.

ಶ್ರೀ ವಿ. ಎಸ್. ಆಚಾರ್ಯ—I object. ನಮ್ಮ ಪಕ್ಷದವರು ಅಲ್ಲಿ ಯಾರೂ ಇಲ್ಲವೆಂದು ಹೇಳುತ್ತಿದ್ದಾರೆ. I am not here to safeguard the interest of my party people only.

SRI BAPUGOWDA DARSHANAPURA—These people with the collusion of the persons who were there and since three years they have colluded with the BJP and I have to charge. I charge them.

ಶ್ರೀ ವಿ. ಎಸ್. ಆಚಾರ್ಯ.—ಅವರು ಒಂದು ಮಾತನ್ನು ಹೇಳಿದರು ಅದಕ್ಕಾಗಿ ತೀವ್ರವಾದ ಆಕ್ಷೇಪವನ್ನು ನಾವು ಮಾಡುತ್ತಿದ್ದೇವೆ. ಬಿ. ಜೆ. ಪಿ. ಯವರು ಅಲ್ಲಿ ಯಾರೂ ಇಲ್ಲವೆಂದು ಹೇಳಿದರು. ನಾವು ಬಿ. ಜೆ. ಪಿ. ಯವರ ಹಿತವನ್ನು ಮಾತ್ರ ಕಾಪಾಡುವುಕ್ಕಾಗಿ ಬಂದಿಲ್ಲ ಇವತ್ತು ಕರ್ನಾಟಕ ರಾಜ್ಯದ ಎಲ್ಲಾ ಜನರ ವಂತು ಯಾವುದೇ ಮೂಲೆಯಲ್ಲಿ ಅನ್ಯಾಯವಾದರೆ ಅವರ ರಕ್ಷಣೆ ಮಾಡುವುದ ಕೋಸ್ಕರವಾಗಿ ಬಂದಿದ್ದೇವೆ. ಆ ದೃಷ್ಟಿಯಿಂದ ಮಾನ್ಯ ಸದಸ್ಯರು ಆ ರೀತಿಯಾದ ಮಾತನ್ನು ಹೇಳಬಾರದು ಅದು ಸರಿಯಲ್ಲ. ಜ್ಞಾನಮ್ಮ ಎನ್ನತಕ್ಕವರ ಕೊಲೆ ತಾ...

MR. SPEAKER.—When you want to make an allegation against any Hon. Member you should give notice.

ಶ್ರೀ ವಿ. ಎಸ್. ಆಚಾರ್ಯ.— ಚರ್ಚೆಯಲ್ಲಿ ಪ್ರಾಸಂಗಿಕವಾಗಿ ಬಂದುದರಿಂದ ಹೇಳಿದ್ದೇನೆ, ತಪ್ಪಿದ್ದರೆ ಅವರು ಹೇಳಲಿ. ಜ್ಞಾನಮ್ಮ ಎನ್ನುವವರ ಕೊಲೆ ಕೇಸ್ ವಕ್ಕೆಯಾಗಲಿಲ್ಲ,

(ಗೊಂದಲ)

ಆ ಹೆಣವನ್ನು ಹೂತುಬಿಟ್ಟಿದ್ದಾರೆ, ಆ ಕೇಸನ್ನು ಮುಚ್ಚಿಬಿಟ್ಟಿದ್ದಾರೆ. ಇದಾದ ವಂತರ ೨೫–೧೦–೮೩ ರಂದು ಕಂಚಿನಗವಿ ಕೊಲೆ ಪ್ರಕರಣದಲ್ಲಿ ಸಿದ್ದಣ್ಣ ಅಮೀನರೆಡ್ಡಿ ಎನ್ನುವವರ.

(ಗೊಂದಲ)

ಶ್ರೀ ಕೆ. ಎಚ್. ರಂಗನಾಥ್.—ಮಾನ್ಯ ಡಾ. ಆಚಾರ್ಯರವರು ಬಹಳ ಸೀರಿಯಸ್ ಆಗಿರತಕ್ಕ ವಿಷಯವನ್ನೇ ಪ್ರಸ್ತಾಪ ಮಾಡುತ್ತಿದ್ದಾರೆ. ಆ ಖಾತೆಗೆ ಸಂಬಂಧಪಟ್ಟ ಯಾರೂ ವಂತ್ರಿಗಳು ಇಲ್ಲ. ಬೇರೆ ಖಾತೆಯ ವಂತ್ರಿಗಳು ಇದ್ದಾರೆ. ಕೊಲೆ ಆಗಿರತಕ್ಕದ್ದನ್ನು ಮುಚ್ಚಿ ಬಿಟ್ಟಿದ್ದಾರೆಂದು ಸ್ಪಷ್ಟವಾಗಿ ಹೇಳುತ್ತಿದ್ದಾರೆ, ನನಗೂ ಕೂಡ ಇದರ ಬಗ್ಗೆ ಸರಿ ತಪ್ಪು ಎನ್ನುವ ಬಗ್ಗೆ ಕೆಲವರು ಪ್ರಿಂಟ್ ಮಾಡಿ ಕಳುಹಿಸಿರತಕ್ಕ ಕಾಗದ ಬಂತು. ಮಾನ್ಯ ವಂಖ್ಯ ಸಚೇತಕರಾದ ಬಾಪುಗೌಡ ದರ್ಶನಾಪುರ್‌ರವರು ಸಹ ಸುಳ್ಳು ಎಂದು ಹೇಳುತ್ತಿದ್ದಾರೆ. ವಿಷಯದ ಗಂಭೀರತೆಯನ್ನು ನೋಡಿದರೆ ಬಹಳ ಗಂಭೀರವಾಗಿದೆ. ಇದರ ಬಗ್ಗೆ ವಂತ್ರಿ ಮಂಡಲದವರೂ ಸರಿಯಾದ ಉತ್ತರವನ್ನು ಹೇಳತಕ್ಕ ವ್ಯವಸ್ಥೆ ಮಾಡದೇ ಹೋದರೆ ಬಹಳ ಕಷ್ಟವಾಗುತ್ತದೆ. ಸ್ಪೇಟ್ ಮಿನಿಸ್ಟರ್ ಫಾರ್ ಹೋಂ ಇದ್ದಾರೆ ಅವರು ಬರಬೇಕು, ಮಾನ್ಯ ವಂಖ್ಯ ವಂತ್ರಿಗಳವರೂ ಈ ಖಾತೆಯನ್ನು ವಹಿಸಿಕೊಂಡಿದ್ದಾರೆ. ಅವರು ಸುಮ್ಮನೇ ರೂಮಿನಲ್ಲಿ ಕೂತುಕೊಂಡರೆ ಆಗುವುದಿಲ್ಲ. ತಾವು ಒಂದು ಪಾಪತನ್ನು ಹೇಳಿದ್ದಕ್ಕಾಗಿ ಅಭಿನಂದಿಸುತ್ತೇನೆ. ಯಾರೇ ಒಬ್ಬ ಸದಸ್ಯರು ಅಲಿಗೇಷನ್ ಮಾಡತಕ್ಕ ಸಂದರ್ಭದಲ್ಲಿ ವಂಚಿತವಾಗಿ ನೋಟೀಸ್ ಕೊಡ

ಬೇಕೆಂದು ಹೇಳಿದ್ದೀರಿ. ಅದು ಸರಿಯಾದ ವಿಚಾರ. ಆದರೆ ಇಲ್ಲಿ ತನಿಖೆಯ ಬಗ್ಗೆ ಪ್ರಸಾಪ ಮಾಡ ತ್ತಿದ್ದಾರೆ ಅದಕ್ಕೆ ಉತ್ತರ ಯಾರು ಹೇಳಬೇಕು ? ಸಂಬಂಧಪಟ್ಟ ಖಾತೆಯ ಮಂತ್ರಿಗಳವರೇ ಇಲ್ಲಿ ಇರಬೇಕಾಗುತ್ತದೆ, ಇಲ್ಲದೇ ಹೋದರೆ ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿ ಹೇಳಿದರೂ ಅದು ವ್ಯರ್ಥವಾಗುತ್ತದೆ. ಆದುದರಿಂದ ತಾವು ಇದರ ಬಗ್ಗೆ ಸರ್ಕಾರಕ್ಕೆ ಸ್ಪಷ್ಟವಾದ ಆದೇಶ ನೀಡಬೇಕು.

ಶ್ರೀ ಎಸ್. ಆರ್. ಬೊಮ್ಮಾಯಿ.—ಸರ್ಕಾರದ ಪರವಾಗಿ ಜವಾಬ್ದಾರಿಯುತವಾದ ಉತ್ತರ ಕೊಡುವ ಬಗ್ಗೆ ಸಿದ್ಧತೆಯಾಗಿದೆ.

ಶ್ರೀ ಕೆ. ಎಚ್. ರಂಗನಾಥ್.—ಸ್ವಾಮಿ, ಮಂತ್ರಿ ಮಂಡಲದ ಯಾವುದೇ ಸದಸ್ಯರು ಸಹ ಉತ್ತರ ವನ್ನು ಕೊಡಬಹುದು ಎನ್ನುವುದು ನನಗೂ ಗೊತ್ತಿದೆ. ಆದರೆ ಆ ಖಾತೆಗೆ ಸಂಬಂಧಪಟ್ಟ ಮಂತ್ರಿಗಳು ಇರುವಾಗ ಬೇರೆಯವರು ಉತ್ತರ ಕೊಡುತ್ತಾರೆಂದು ಹೇಳುವುದಾದರೆ ಒಬ್ಬೊಬ್ಬರಿಗೊಂದು ಖಾತೆಗಳು ಏತಕ್ಕೆ ಇರಬೇಕು ? ಒಬ್ಬಬ್ಬರಿಗೊಂದು ಖಾತೆ ಇದ್ದರೆ ಅವರು ದಿನನಿತ್ಯ ವ್ಯವಹಾರಗಳ ಬಗ್ಗೆ ಮಾಹಿತಿ ಇರುತ್ತದೆ ವಿಷಯವನ್ನು ತಿಳಿದುಕೊಂಡಿರುತ್ತಾರೆ, ಆ ವಿಷಯದ ಬಗ್ಗೆ ಅಭ್ಯಾಸ ಮಾಡಿರುತ್ತಾರೆ, ದಿನ ನಿತ್ಯದ ಆಗು ಹೋಗುಗಳನ್ನು ನೋಡಿರುತ್ತಾರೆ, ಆ ದೃಷ್ಟಿಯಿಂದ ಅವರು ಜವಾಬ್ದಾರಿಯುತವಾಗಿ ಉತ್ತರ ಕೊಡುವುದಕ್ಕೆ ಸಂಬಂಧಪಟ್ಟ ಮುಖ್ಯಮಂತ್ರಿಗಳಾಗಲೀ ಇಲ್ಲವೇ ಸ್ಟೇಟ್ ಮಿನಿಸ್ಟರ್‌ಫಾರ್ ಹೋಂರವರು ಆಗಲೀ ಇರತಕ್ಕದ್ದು ಅತ್ಯಗತ್ಯ. ಬೇರೆ ಯಾರೋ ಉತ್ತರ ಕೊಟ್ಟರೆ ಏನಾಗುತ್ತದೆ.

MR. SPEAKER.—I agree with the Hon. Member.

SRI M.S. KRISHNAN.—It is included in the list of business.

ಶ್ರೀ ವಿ. ಎಸ್. ಆಚಾರ್ಯ.—ಮಾನ್ಯ ಅಧ್ಯಕ್ಷರೆ,ನಾನು ಈ ವಿಷಯವನ್ನು ಸಭೆಯಲ್ಲಿ ಪ್ರಸ್ತಾಪಮಾಡಿ ಆಪಾದನೆ ಮಾಡಬೇಕೆಂಬ ಆಸಕ್ತಿ ನನಗೆ ಇಲ್ಲ. ಈ ರಾಜ್ಯದಲ್ಲಿ ಕಾನೂನು ವ್ಯವಸ್ಥೆಯನ್ನು ಕಾಪಾಡಿಜನರ ಜೀವನ ಮಂತ್ರ, ಆಸ್ತಿಪಾಸ್ತಿಯನ್ನು ರಕ್ಷಣೆ ಮಾಡಬೇಕಾದ ಪೋಲೀಸರು ಯಾರಿದ್ದಾರೆ, ಅವರು ಯಾರೇ ಆಗಲಿ ಅವರು ಹಸ್ತಕ್ಷೇಪ ಮಾಡುವುದನ್ನು ಖಂಡಿತಾಯ ಮಾಡಬೇಕೆನ್ನುವ ಉದ್ದೇಶದಿಂದ ನಾನು ಈ ವಿಷಯವನ್ನು ಹೇಳುತ್ತಿದ್ದೇನೆ. ಈ ಪ್ರಕರಣದ ಬಗ್ಗೆ ಅಧಿವೇಶನ ಮುಗಿಯುವುದರೊಳಗೆ ಪ್ರಸ್ತಾಪಮಾಡಲಿಕ್ಕೆ ಕಾಲಾವಕಾಶವನ್ನು ಕೊಡಬೇಕೆಂದು ನಾನು ತಮ್ಮನ್ನು ಪದೇ ಪದೇ ಕೇಳಿಕೊಂಡಾಗ, ಇವತ್ತು ತಾವು ನಾನು ಪ್ರಸ್ತಾಪಮಾಡಲು ಅವಕಾಶ ಕೊಟ್ಟಿದ್ದೀರಿ.

ಶ್ರೀ ಕೆ. ಎಚ್. ರಂಗನಾಥ್. ಈ ವಿಷಯವನ್ನು ಪ್ರಸ್ತಾಪ ಮಾಡುವಾಗ ಸಂಬಂಧಪಟ್ಟ ರಾಜ್ಯ ಗೃಹಸಚಿವರು ಸಭೆಯಲ್ಲಿರಬೇಕು. ಮಾನ್ಯ ಅಧ್ಯಕ್ಷರು ದಯಮಾಡಿ ಅವರು ಸಭೆಯಲ್ಲಿರುವಂತೆ ವ್ಯವಸ್ಥೆ ಮಾಡಬೇಕಾಗುತ್ತದೆ.

ಅಧ್ಯಕ್ಷರು. ಮಾನ್ಯಸದಸ್ಯರು ಹೇಳುವುದನ್ನು ನಾನು ಒಪ್ಪುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ. ಮಾನ್ಯ ಅಧ್ಯಕ್ಷರೆ. ಈ ವಿಚಾರದಲ್ಲಿ ಮಾನ್ಯ ಮುಂಖ್ಯ ಮಂತ್ರಿಗಳು ಕಾನೂನು ಮಂತ್ರಿಗಳು ಉತ್ತರ ಕೊಡಲಿಕ್ಕೆ ವ್ಯವಸ್ಥೆ ಮಾಡಿದ್ದಾರೆ. ಸಂಬಂಧಪಟ್ಟ ಮಂತ್ರಿಗಳು ಸಭೆಯಲ್ಲಿರಬೇಕು ಅದರ ಬಗ್ಗೆ ಇನ್ನು ಭಿನ್ನಾಭಿಪ್ರಾಯವಿಲ್ಲ ಈ ವಿಚಾರದ ಬಗ್ಗೆ ಸರ್ಕಾರ ಜವಾಬ್ದಾರಿಯಿಂದ ಉತ್ತರ ಕೊಡುತ್ತದೆ.

SRI K. H. RANGANATH.—Agreeing with me is something and forcing the Government, asking the Hon. Minister to be here and reply is different. ಅವರು ವಿಷಯಗಳನ್ನು ಕೇಳಿರುತ್ತಾರೆ ನೋಡಿರುತ್ತಾರೆ. ಅವರು ಸಭೆಗೆ ಬರದಿದ್ದರೆ ಅವರಿಗಾಗಿ ಸರ್ಕಾರ ಏತಕ್ಕೆ ಹಣವನ್ನು ಖರ್ಚುಮಾಡಬೇಕು? ಕಾನೂನು ಮಂತ್ರಿಗಳು ಚೆನ್ನಾಗಿ ಉತ್ತರವನ್ನು ಕೊಡಬಹುದು, ಅದನ್ನು ಒಪ್ಪುವವರು ಇದ್ದರೆ ಇರಬಹುದು. ಹಾಗಾದರೆ ರಾಜ್ಯಮಂತ್ರಿಗಳು ಏತಕ್ಕೆ ಇರಬೇಕು ? ಇವತ್ತು ರಾಜ್ಯಮಂತ್ರಿಗಳು ಊರಿನಲ್ಲಿ ಇಲ್ಲವೊ ? ಕಾರ್ಯಕ್ರಮದ ಪಟ್ಟಿಯಲ್ಲಿ ಈ ವಿಚಾರವನ್ನು ಸೇರಿಸಿರ ವಾಗ ಅವರು ಸಭೆಯಲ್ಲಿ ಇರಬೇಕೋ ಬೇಡವೊ?

ಅಧ್ಯಕ್ಷರು.—ಅದನ್ನು ನಾನು ಒಪ್ಪುತ್ತೇನೆ.

SRI K. H. RANGANATH.--Why shoud we have the State Minister for Home then? Does he not know that this matter is listed in to-day's agenda?

ಶ್ರೀ ವಿ. ಎಸ್. ಆಚಾರ್ಯ.---ಮಾನ್ಯ ಸದಸ್ಯರಾದ ರಂಗನಾಥ್‌ರವರು ಹೇಳಿದ ಮಾತನ್ನು ನಾನು ಒಪ್ಪುತ್ತೇನೆ. ಮಾನ್ಯ ಅಧ್ಯಕ್ಷರೆ, ೧೯೭೪ನೇ ಇಸವಿಯಲ್ಲಿ ಕೂರಿ ಅಂಕಪ್ಪನ ಕೇಸು, ಲಕ್ಷ್ಮಣ ಕೇಸು ದಿನಾಂಕ ೨೪--೭--೮೩ರಲ್ಲಿ ನಡೆದಂತಹ ಡ್ಯಾನಮ್ಮನ ಕೇಸು ದಿನಾಂಕ ೨೫-೧೦-೮೩ರಲ್ಲಿ ನಡೆದ ಕಂಚಿನಗವಿ ಗ್ರಾಮದಲ್ಲಿ ಸಿದ್ದಣ್ಣ ಮತ್ತು ಹೇಮಣ್ಣರೆಡ್ಡಿ ಮನೆಗೆ ಬೆಂಕಿ ಹಾಕಿ ಮಾಡಿದ ಹೆಂಚನ್ನು ತೆಗೆದು ವಿಷ ಅನಿಲ ಪ್ರಯೋಗಮಾಡಿ ಕೊಲ್ಲುವ ಪ್ರಯತ್ನ ಮಾಡಿದ್ದಾರೆ. ಬಸವರಾಜು ದರ್ಶನಾಪುರ ಹಂತ್ತು ಆತನ ಸಂಗಡಿಗರು ೫೦ ಜನ ಸೇರಿಕೊಂಡು ಮನೆಯೊಳಗೆ ನುಗ್ಗಿ ಹೊಡೆದಿದ್ದಾರೆ. ಕೊಡಲಿ, ಬಡಿಗ ಇನ್ನಿತರ ಮಾರಕಾಸ್ತ್ರ ಹಿಡಿದು ಹಲ್ಲೆ ಮಾಡಿದ್ದಾರೆ, ಸಿದ್ದಣ್ಣ ಮತ್ತು ಹೇಮಣ್ಣರೆಡ್ಡಿ ಎಂಬುವರು ಮನೆಯಿಂದ ಹೊರಗೆ ದಾರದಹಾಗೆ ಬಾಗಿಲು ಹಾಕಿಕೊಂಡಿದ್ದರು.

ಶ್ರೀ ಎಸ್.ಆರ್. ಬೊಮ್ಮಾಯಿ.--ಮಾನ್ಯ ಅಧ್ಯಕ್ಷರೆ, ಈ ವಿಚಾರದಲ್ಲಿ ಪೋಲೀಸ್‌ನವರು ಇನ್ವೆಸ್ಟಿಗೇಷನ್ ಮಾಡಿ ಕೇಸು ಕೋರ್ಟ್‌ಗೆ ಹೋಗಿದೆ. ಶಿಪ್ಪಿತಸ್ಥರ ಮೇಲೆ ಚಾರ್ಜ್‌ಷೀಟು ಹಾಕಿದ್ದಾರೆ. ಆ ವಿಷಯವನ್ನು ಇಲ್ಲಿ ಪ್ರಸ್ತಾವಮಾಡಿದರೆ ಸಬ್‌ಜ್ಯುಡೀಸ್ ಆಗುತ್ತದೆ. ಕೋರ್ಟ್ ಮುಂದೆ ವಿಷಯ ಇರುವಾಗ, ವಿಚಾರಣೆ ನಡೆಯುತ್ತಿರುವಾಗ ಮಾನ್ಯಸದಸ್ಯರು ಕೊಲೆ ಹಾಗೆ ಹೀಗೆ ಎಂದು ಏನೇನೋ ಹೇಳುತ್ತಿದ್ದಾರೆ.

ಶ್ರೀ. ವಿ. ಎಸ್. ಆಚಾರ್ಯ.---ಮಾನ್ಯಮಂತ್ರಿಗಳು ಹೇಳುತ್ತಿರುವುದು ಕಂಚಿನಗವಿ ಕೇಸು. ನಾನು ಹೇಳುತ್ತಿರುವುದು ಮನೆಗೆ ವಿಷ ಅನಿಲ ಪ್ರಯೋಗಮಾಡಿ ಸಿದ್ದಣ್ಣ ಮತ್ತು ಹೇಮಣ್ಣರೆಡ್ಡಿ ಎಂಬುವರನ್ನು ಕೊಲ್ಲಲು ಕೆಲವರು ಪ್ರಯತ್ನಮಾಡಿದ್ದಾರೆ. ಹೇಮಣ್ಣರೆಡ್ಡಿ ಎಂಬುವರು ಲಾ ಪರೀಕ್ಷೆಗೆ ಹೋಗಿದ್ದರು ಅವರು ಊರಿನಲ್ಲಿ ಇಲ್ಲದಿದ್ದರೂ ಅವರ ಮೇಲೆ ಆರು ಕೇಸುಗಳನ್ನು ಹಾಕಿದ್ದಾರೆ. ಕೆಲವರ ಇಷ್ಟದಂತೆ ನಡೆಯದಿದ್ದರೆ ಅವರು ಸರ್ಕಾರೀ ಯಂತ್ರವನ್ನು ಬಳಸಿಕೊಂಡು ಪೋಲೀಸರನ್ನು ಬಳಸಿಕೊಂಡು ಅತ್ಯಂತ ಹೀನ ಕೆಲಸವನ್ನು ಮಾಡಿದ್ದಾರೆ. ಮಾನ್ಯಮಂತ್ರಿಗಳು ತಪ್ಪಿತಸ್ಥರ ಮೇಲೆ ಚಾರ್ಜ್‌ಷೀಟು ಹಾಕಿದ್ದೇವೆಂದು ಹೇಳಿದ್ದಾರೆ. ದಿನಾಂಕ ೧೧-೧೧-೮೯ರಲ್ಲಿ ಮಾನ್ಯ ಮುಖ್ಯಮಂತ್ರಿಗಳಿಗೆ ಅವರು ಮನವಿಯನ್ನು ಸಲ್ಲಿಸಿದ್ದಾರೆ.ಯಾರು ನಿರಪರಾಧಿಗಳಿದ್ದಾರೆ ಅಂತಹವರನ್ನು ಅಪರಾಧಿಗಳು ಎಂದು ಕೇಸುಗಳಲ್ಲಿ ಸೇರಿಸಿದ್ದಾರೆ. ಭೀಮಣ್ಣಗೌಡ, ಗೌಡಪ್ಪಗೌಡ ಇವರಲ್ಲಿ ಒಬ್ಬರು ಆಸ್ಪತ್ರೆಯಲ್ಲಿದ್ದರು. ಮತ್ತೊಬ್ಬರು ಆ ದಿವಸ ಶವಸಂಸ್ಕಾರಕ್ಕೆ ಬೇರೆ ಊರಿಗೆ ಹೋಗಿದ್ದರು. ಇಂತಹವರ ಮೇಲೆ ಕೇಸುಗಳನ್ನು ಹಾಕಿದ್ದಾರೆ. ಮಾನ್ಯ ಮುಖ್ಯ ಮಂತ್ರಿಗಳ ನಿರ್ದೇಶನವಿದ್ದರೂ ಕೂಡ ಪೋಲೀಸ್ ಸವರು ಕೆಲಸಮಾಡಿಲ್ಲ ದಿನಾಂಕ ೨೬-೧೨-೮೯ರಂದು ಮತ್ತು ೧೬-೧-೮೯ರಲ್ಲಿ ಮುಖ್ಯ ಮಂತ್ರಿಗಳಿಗೆ ಹೇಳಿದ್ದಾರೆ. ೧೯೭೪ನೇ ಇಸವಿಯಲ್ಲಿ ದೇವರಾಜಅರಸ್‌ರವರು ಮುಖ್ಯ ಮಂತ್ರಿಗಳಾಗಿದ್ದಾಗ ೨೫ ಜನಗಳ ಮೇಲೆ ಚಾರ್ಜ್‌ಷೀಟು ಸಲ್ಲಿಸಿದ್ದ ಕೇಸ್‌ನಲ್ಲಿ ಸಿ. ಓ. ಡಿ. ಎನ್‌ಕ್ವಾಯರಿ ಮಾಡಿಸಿ ಇಬ್ಬರೂ ಈ ಕೇಸ್‌ನಲ್ಲಿ ಇನ್‌ವಾಲ್ವ್ ಆಗಿರಲಿಲ್ಲವೆಂದು ಅಪಾದನೆಯಿಂದ ಅವರನ್ನು ವಿಮುಕ್ತರನ್ನಾಗಿ ಮಾಡಲಾಗಿದೆ. ಇವರನ್ನು ವಿಮುಕ್ತರನ್ನಾಗಿ ಮಾಡಲಿಕ್ಕೆ ಯಾವುದೇ ರೀತಿಯ ತಾಂತ್ರಿಕ ತೊಂದರೆಯಿರಲಿಲ್ಲ. ಐ.ಪಿ.ಸಿ. ಮತ್ತು ಸಿ. ಆರ್. ಪಿ. ಸಿ. ಸೆಕ್ಷನ್‌ಗಳ ಪ್ರಕಾರ ಚಾರ್ಜ್‌ಷೀಟು ಹಾಕಿದ ನಂತರವೂ ಸಿ. ಓ. ಡಿ. ಮುಖೂಲಕ ಎನ್‌ಕ್ವಾಯರಿ ಮಾಡಲಿಕ್ಕೆ ಅವಕಾಶವಿದೆ. ಲೋಕಲ್ ಪೋಲೀಸ್ ನವರು ಯಾವರೀತಿ ಜನಗಳಿಗೆ ತೊಂದರೆ ಕೊಡುತ್ತಾರೆ ಎನ್ನುವುದು ಸಿ. ಓ. ಡಿ. ತನಿಖೆಯಿಂದ ಶತ್ಯಾಂಶ ಹೊರಗೆ ಬರಲಿ. ಅನಾವಶ್ಯಕವಾಗಿ ನಿರಪರಾಧಿಗಳ ಮೇಲೆ ಅಪಾದನೆಗಳನ್ನು ಮಾಡಲಾಗುತ್ತಿದೆ. ಇದರ ಬಗ್ಗೆ ಸಿ. ಓ. ಡಿ. ತನಿಖೆ ಮಾಡಬೇಕೆಂದೂ ಅದಕ್ಕಿಂತ ಕಡಿಮೆ ದರ್ಜೆಯ ತನಿಖೆಗೆ ಒಪ್ಪುವುದಕ್ಕೆ ಸಾಧ್ಯವಿಲ್ಲ. ಸಿ.ಓ.ಡಿ. ತನಿಖೆಗೆ ಒಳಪಡಿಸಬೇಕೆಂದು ಈ ವಿಷಯವನ್ನು ತಮ್ಮ ಮುಂದೆ ಇಟ್ಟಿದ್ದೇನೆ.

ಶ್ರೀ ಗೋವಿಂದ ಪಿ. ಒಡೆಯರಾಜ್ (ಕಮಲಾಪುರ) ಮಾನ್ಯ ಆಚಾರ್ಯರವರು ಎಷ್ಟೊಂದು ವಿಷಯದ ಬಗ್ಗೆ ಪ್ರಸ್ತಾಪನೆಮಾಡಿದ್ದಾರೆ. ರಾಜಕೀಯದಲ್ಲಿ ಯಾರಾದರೂ ಬರುತ್ತಾರೆ ಹೋಗುತ್ತಾರೆ. ಆದರೆ ಅಧಿಕಾರ ದುರುಪಯೋಗ ಮಾಡಿಕೊಂಡು ಜನಗಳಿಗೆ ಅನ್ಯಾಯವಾಗುವಂತಹ ಕೆಲಸವನ್ನು ಮಾಡ

ಬಾರದು. ಕೊಲೆಯಾಗತಕ್ಕದ್ದು. ಈ ತರಹ ಜನಗಳಿಗೆ ಅನ್ಯಾಯವನ್ನು ಮಾಡಿ ತೊಂದರೆಕೊಡಬಾರದು. ಶಾಂತಿ ಸ್ಥಾಪನೆಯಲ್ಲಿ ಪೋಲೀಸ್‌ನವರಿಗೆ ಸಹಾಯವಾಗಬೇಕೆನ್ನುವ ಉದ್ದೇಶದಿಂದ ನಾವು ಈ ವಿಷಯವನ್ನು ಚರ್ಚೆಗೆ ತಂದಿದ್ದೇವೆ. ಮಾನ್ಯ ಆಚಾರ್ಯರವರು ಈ ವಿಷಯವನ್ನು ಪ್ರಸ್ತಾಪಮಾಡಿದ ತಕ್ಷಣ ಮಾನ್ಯ ಬಾಪೂಗೌಡರು ಸ್ವಲ್ಪ ಸಿಟ್ಟಿಗೆದ್ದು ಮಾತನಾಡಿದರು. ಏತಕ್ಕೆ ಆ ರೀತಿ ಮಾತನಾಡಿದರೂ ಎಂದು ನಮಗೆ ಗೊತ್ತಾಗಲಿಲ್ಲ. ಮಾನ್ಯ ಮುಖ್ಯ ಮಂತ್ರಿಗಳು ಎಷ್ಟೂರು ವಿಷಯ ಬಿಟ್ಟು ಬೇರೆ ವಿಷಯಗಳ ಬಗ್ಗೆ ಹೇಳಿಕೆಗಳನ್ನು ಕೊಟ್ಟಿದ್ದಾರೆ. ವಿಧಾನಪರಿಷತ್‌ನಲ್ಲಿ ಈ ವಿಷಯ ಪ್ರಸ್ತಾಪವಾಗಿದೆ. ಈ ವಿಷಯ ಪತ್ರಿಕೆಗಳಲ್ಲಿ ಪ್ರಕಟವಾಗಿದೆ ಮನವಿಗಳನ್ನು ಸಲ್ಲಿಸಲಾಗಿದೆ. ಅಡ್ವೋಕೇಟ್ಸ್‌ಗಳು ಈ ವಿಷಯವನ್ನು ಪ್ರಸ್ತಾಪಮಾಡಿದ್ದಾರೆ. ಇದು ಸಾರ್ವಜನಿಕ ವಿಷಯ ಇದು ನನ್ನ ಸ್ವಂತ ವಿಷಯ ಅಲ್ಲವೆನ್ನುವುದು ಮಾನ್ಯ ಬಾಪೂಗೌಡರಿಗೆ ಗೊತ್ತಿದೆ. ಬಾಪೂಗೌಡರು ಅಧಿಕಾರ ದುರುಪಯೋಗ ಮಾಡಿಕೊಂಡಿದ್ದಾರೆ ಎನ್ನುವ ಆವಾದನೆ ಸಾರ್ವಜನಿಕರಿಂದ ಬಂದಿದೆ, ಮಾನ್ಯ ಆಚಾರ್ಯರವರು ಮಂತ್ರಿ ನಾನು ಆಪಾದನೆಯನ್ನು ಮಾಡುತ್ತಿಲ್ಲ ಮಾನ್ಯ ಮುಖ್ಯಮಂತ್ರಿಗಳಿಗೆ ಅಲ್ಲಿನ ಜನರು ಅವರು ಅಲ್ಲಿ ಹೋಗಿದ್ದಾಗ ಅವರು ಆಪಾದನೆ ಮಾಡಿದ್ದಾರೆ. ಬಾಪೂಗೌಡರು ಒಳ್ಳೆಯ ಕೆಲಸ ಮಾಡುತ್ತಿದ್ದಾರೆನ್ನುವ ರೆಪ್ರಸೆಂಟೇಷನ್‌ಗಳು ಕೂಡ ಬಂದಿವೆ. ಅವರು ಅಧಿಕಾರ ದುರುಪಯೋಗ ಮಾಡಿಕೊಂಡಿಲ್ಲ, ಅವರು ಜನತಾ ಪಾರ್ಟಿಯಲ್ಲಿದ್ದು ಒಳ್ಳೆಯ ಕೆಲಸಮಾಡುತ್ತಿರುವುದರಿಂದ ಅವರ ಮೇಲಿನ ಹೊಟ್ಟೆಕಿಚ್ಚಿನಿಂದ ಅವರಿಗೆ ಕೆಟ್ಟ ಹೆಸರು ತರಬೇಕೆನ್ನುವ ಉದ್ದೇಶದಿಂದ ಈ ರೀತಿ ಮಾಡಲಾಗುತ್ತಿದೆ ಎನ್ನುವ ರೆಪ್ರಸೆಂಟೇಷನ್‌ಗಳು ಕೂಡ ಬರುತ್ತಿವೆ. ಮನವಿಗಳು ನಮಗೂ ಬಂದಿವೆ ಮಾನ್ಯ ಮುಖ್ಯಮಂತ್ರಿಗಳಿಗೂ ಬಂದಿವೆ. ಈ ಪ್ರಶ್ನೆಯನ್ನು ತುಲನೆಮಾಡಿ ನೋಡಿದರೆ ಬಾಪೂಗೌಡರು ಸ್ಥಳೀಯವಾಗಿ ಪೋಲೀಸರ ಮೇಲೆ ಒತ್ತಾಯ ತಂದರೋ ಇಲ್ಲವೋ ಎನ್ನತಕ್ಕದ್ದನ್ನು ಪಕ್ಕೆ ಹಚ್ಚಲಿಕ್ಕೆ ಈ ವಿಷಯ ಚರ್ಚೆಯಾಗಬೇಕಾಗಿದೆ. ಇದು ಮುಖ್ಯವಾದ ವಿಷಯ. ಸಾರ್ವಜನಿಕವಾಗಿ ಇದರ ಬಗ್ಗೆ ಮುಖ್ಯಮಂತ್ರಿಗಳಿಗೆ ಮನವಿಗಳು ಬಂದಿವೆ. ಅದೇರೀತಿಯಾಗಿ ಮಾನ್ಯ ಕೆ. ರುದ್ರಪ್ಪಗೌಡರು ಅಡ್ವೋಕೇಟ್ ಅವರು ಸಾಮಾನ್ಯ ಮನುಷ್ಯರಲ್ಲ. ಮಾನ್ಯ ಮುಖ್ಯಮಂತ್ರಿಗಳು ಶಹಾಪುರಕ್ಕೆ ಹೋಗಿದ್ದಾಗ ಅವರು ಮುರ್ನಾಲ್ಕು ರೆಪ್ರಸೆಂಟೇಷನ್‌ಗಳನ್ನು ಕೊಟ್ಟಿದ್ದಾರೆ. ಇದರ ತಾತ್ಪರ್ಯ ವೇನೆಂದರೆ.

ಅಧ್ಯಕ್ಷರು.—ಸಿ. ಒ. ಡಿ. ಗೆ ರೆಪರ್ ಮಾಡಿಯೆಂದು ಹೇಳುತ್ತೀರಾ ?

ಶ್ರೀ ಗೋವಿಂದ ಪಿ.ಒಡೆಯರಾಜ್.—ತಾವು ಏತಕ್ಕೆ ಜವಾಬ್ದಾರಿಯನ್ನು ತೆಗೆದುಕೊಳ್ಳುತ್ತೀರಿ? ತಾವು ಜವಾಬ್ದಾರಿಯನ್ನು ತೆಗೆದುಕೊಳ್ಳುವುದು ಬೇಡ.

ಅಧ್ಯಕ್ಷರು.—ಸರ್ಕಾರದವರು ಸಿ.ಒ.ಡಿ.ಗೆ ರೆಫರ್ ಮಾಡುತ್ತಾರೋ ಬಿಡುತ್ತಾರೋ ಅದು ಅವರಿಗೆ ಸೇರಿದ್ದು.

ಶ್ರೀ ಗೋವಿಂದ ಪಿ. ಒಡೆಯರಾಜ್.—ಎಷ್ಟೂರು ವಿಚಾರವಶನ್ನು ನಾನು ಫೆಬ್ರವರಿ ೧೯ರಳಿರಂದು ಪ್ರಸ್ತಾಪಮಾಡಿದ್ದೇನೆ.

ಫೆಬ್ರವರಿ ೬ನೇ ತಾರೀಕು ಪ್ರಸ್ತಾಪ ಮಾಡಿದಾಗ ಇದರಲ್ಲಿ ವಿಷೂ ಇಲ್ಲ, ರಾಜಕೀಯ ಪ್ರಭಾವ ನಡೆದಿಲ್ಲ, ಮಾನ್ಯ ಬಾಪೂಗೌಡರು ಯಾವ ಪ್ರಭಾವವನ್ನೂ ಬೀರಿಲ್ಲ ಮಂತ್ರಿ ಪೋಲೀಸರ ಮೇಲೆ ಒತ್ತಡ ತಂದಿಲ್ಲ ಎನ್ನುವ ಧಾಟಿಯಲ್ಲಿ ಮಾನ್ಯ ಮುಖ್ಯಮಂತ್ರಿಯವರು ಉತ್ತರವನ್ನು ಕೊಟ್ಟರು, ನಿಜಾಂಶವನ್ನು ಹೊರಗೆ ತರಬೇಕಾದರೆ ಪೋಲೀಸಿನವರು ಎಷ್ಟರಮಟ್ಟಿಗೆ ಕರ್ತವ್ಯನಿರ್ವಹಣೆ ಮಾಡಿದ್ದಾರೆ ಎಂದು ನಾವು ಕೇಳಿದಾಕ್ಷಣ ಏನೂ ಇಲ್ಲವೆಂದು ಹೇಳಿಬಿಡುತ್ತಾರೆ. ಸಿದ್ದರಾಮೇಶನ ಕೊಲೆ ಕೇಸಿನಲ್ಲಿ ಪೋಲೀಸಿನವರ ಕೈವಾಡ ಇದೆಯೆಂದು ನಾವು ಪದೇಪದೇ ಹೇಳಿದರೂ ಕೂಡ ಇಲ್ಲವೆಂದೇ ಹೇಳಿ, ಕೊನೆಗೆ ಪೋಲೀಸಿನವರ ಕೈವಾಡ ಇದೆಯೆಂದು ಇಬ್ಬರು ಪೋಲೀಸ್ ಸಬ್ ಇನ್‌ಸ್ಪೆಕ್ಟರ್‌ಗಳನ್ನು ಸಸ್ಪೆಂಡ್ ಮಾಡಿದರು ಮತ್ತು ನಾಲ್ಕು ಮಂದಿ ಕಾನ್‌ಸ್ಟೇಬಲ್‌ಗಳನ್ನು ಮನೆಗೆ ಕಳಿಸಿದರು. ಈ ಮಾತನ್ನು ಏತಕ್ಕೆ ಒತ್ತಾಯ ಪೂರ್ವಕವಾಗಿ ಹೇಳುತ್ತಿದ್ದೇನೆಂದರೆ ಇಬರಲ್ಲಿ ಸತ್ಯಾಂಶ ಹೊರಬರಬೇಕಾದರೆ ಸರ್ಕಾರದವರು ಈ ಎಷ್ಟೂರು ಮರ್ಡರ್ ಕೇಸಿನಲ್ಲಿ ಸಿ.ಒ.ಡಿ. ತನಿಖೆ ಮಾಡಿಸಲೇಬೇಕು. ಮಾನ್ಯ ಆಚಾರ್ಯರವರು ಹಿಂದೆ ನಡೆದ ಅನೇಕ ಕೇಸುಗಳ ಉದಾಹರಣೆಯನ್ನು ಕೊಟ್ಟರು. ಹಿಂದೆ ಮಾನ್ಯ ದೇವರಾಜ ಅರಸು ಅವರು ಸಿ.ಒ.ಡಿ. ತನಿಖೆ ಮಾಡಿಸಿದ್ದರಿಂದ ಅನೇಕರು ನಿರಪರಾಧಿಗಳೆಂದು ಸಿದ್ಧವಾಯಿತು.

ನಾವು ವಿರೋಧ ಪಕ್ಷದಲ್ಲಿ ಇರುವವರು ಬಿ.ಜೆ.ಪಿ. ಯವರು ಸಾರ್ವಜನಿಕ ಹಿತದೃಷ್ಟಿಯಿಂದ ಇಲ್ಲಿ ಕೆಲಸ ಮಾಡುತ್ತಿದ್ದೇವೆ. ಶಹಾಪುರ ತಾಲ್ಲೂಕಿನಲ್ಲಿ ಪೋಲೀಸಿನವರು ಸರಿಯಾಗಿ ಕೆಲಸ ಮಾಡುತ್ತಿಲ್ಲ, ಅವರ ಮೇಲೆ ಪ್ರಭಾವ ಬೀರಲಾಗುತ್ತದೆ, ನಿಜವಾದ ಕೊಲೆ ಆಪಾದಿತರು ಯಾರು ಇದ್ದಾರೆ, ಅವರನ್ನು ಹಿಡಿಯುತ್ತಿಲ್ಲ. ನಿರಪರಾಧಿಗಳನ್ನು ಈ ಪ್ರಕರಣದಲ್ಲಿ ಸೇರಿಸುತ್ತಿದ್ದಾರೆ ಎಂದು ಸಾರ್ವಜನಿಕವಾಗಿ ಅಭಿಪ್ರಾಯ ಇರುವುದರಿಂದ ಸತ್ಯಾಂಶ ಏನೆಂಬುದು ಹೊರಬರಲೇಬೇಕು. ಆದ್ದರಿಂದ ನಾನು ಮಾನ್ಯ ಬಾಪೂಗೌಡರಲ್ಲಿ ಪ್ರಾರ್ಥನೆ ಮಾಡಿಕೊಳ್ಳುವುದೇನೆಂದರೆ, ಅವರು ಇದನ್ನು ಪ್ರತಿಷ್ಠೆಯ ಪ್ರಶ್ನೆಯಾಗಿ ನೋಡಬಾರದು. ಸತ್ಯಾಂಶ ಏನೆಂಬುದು ಹೊರಬರಲಿ. ಇದರಿಂದ ಅವರ ಘನತೆಗೌರವ ಕೂಡ ಜಾಸ್ತಿಯಾಗುತ್ತದೆ. ಸಾರ್ವಜನಿಕವಾಗಿ ಏನು ಅಭಿಪ್ರಾಯ ಇದೆ ಎಂದರೆ.....

ಶ್ರೀ ಬಾಪೂಗೌಡ ದರ್ಶನಾಪುರ.—ಶ್ರೀ ಮಾನ್ ಒಡೆಯರಾಜ್ ಅವರು ಗುಲ್ಬರ್ಗ ಜಿಲ್ಲೆಯಲ್ಲಿ ಹತ್ತು ವರ್ಷ ಇದ್ದರು. ಅಲ್ಲಿ ಎಂತಹ ವ್ಯಕ್ತಿಗಳು ಇದ್ದಾರೆ ಎಂಬುದು ತಮಗೆ ಗೊತ್ತಿದೆ. ಇಲ್ಲಿ ರಾಜಕೀಯ ಬೆಳೆಸಿ ಸಾಫಾಗಿ ಮಾತನಾಡಿ ನೀವು ಯಾರ ಮೇಲೆ ಗೂಬೆ ಕೂರಿಸಲಿಕ್ಕೆ ಪ್ರಯತ್ನ ಮಾಡುತ್ತಿದ್ದೀರೋ ಅದಕ್ಕೆ ಉತ್ತರ ನಮ್ಮಲ್ಲಿದೆ. ಗುಲ್ಬರ್ಗಾ ಜಿಲ್ಲೆಯಲ್ಲಿ ಬಾಪೂಗೌಡ ಹೇಗೆ ಇದ್ದಾನೆ, ಬಾಪೂಗೌಡನ ಚಟುವಟಿಕೆ ಏನಿದೆ, ಆತ ಎಷ್ಟು ಪ್ರಭಾವ ಬೀರುತ್ತಾನೆ ಎಂಬುದು ನಿಮಗೆ ಗೊತ್ತಿದೆ. ಹೀಗೆ ಗೊತ್ತಿದ್ದರೂ ಕೂಡ ರಾಜಕೀಯ ಬೆಳೆಸಲಿಕ್ಕೆ ಪ್ರಯತ್ನ ಮಾಡುತ್ತಿದ್ದೀರಿ. ಇದನ್ನು ಯಾರೂ ಕೂಡ ಮಾಡಬಾರದು. It is dirty politics.....

ಶ್ರೀ ಗೋವಿಂದ ಪಿ. ಒಡೆಯರಾಜ್.—ಕಾಮಾಲೆಯಾದವರಿಗೆ ಎಲ್ಲವೂ ಹಳದಿಯಾಗಿ ಕಾಣುತ್ತದೆ. ಈಗ ನಾನು ಇಲ್ಲಿ ರಾಜಕೀಯ ಮಾಡುತ್ತಿಲ್ಲ. ಮಾನ್ಯ ಆಚಾರ್ಯ ಅವರು ಹೇಳಿದ ಹಾಗೆ.....

ಶ್ರೀ ಬಾಪೂಗೌಡ ದರ್ಶನಾಪುರ.—ರಾಜಕೀಯ ನಮಗೂ ಕೂಡ ಮಾಡಲಿಕ್ಕೆ ಬರುತ್ತದೆ. I am not so weak. I can also play politics with you.....

ಶ್ರೀ ಗೋವಿಂದ ಪಿ. ಒಡೆಯರಾಜ್.—ರಾಜಕೀಯ ನಾವು ಮಾಡುತ್ತಿಲ್ಲ. ಏಳೂರು ಮರ್ಡರ್ ಕೇಸ್‌ನಲ್ಲಿ ನಿಷ್ಪಕ್ಷಪಾತವಾದ ತನಿಖೆ ಆಗಬೇಕಾದರೆ ಸಿ.ಓ.ಡಿ. ಎನ್‌ಕ್ವೈರಿ ಆಗಬೇಕೆಂದು ತಮ್ಮ ಪಕ್ಷದ ಇನ್ನೊಬ್ಬ ಮಂತ್ರಿಗಳಾದ ಸನ್ಮಾನ್ಯ ವಿಶ್ವನಾಥ ರೆಡ್ಡಿಯವರು ಕೂಡ ಮಾನ್ಯ ಮುಖ್ಯಮಂತ್ರಿಗಳಿಗೆ ಹೇಳಿದ್ದಾರೆ ಮತ್ತು ಬರೆದಿದ್ದಾರೆ. ಇದರಲ್ಲಿ ರಾಜಕೀಯ ಏನಿದೆ ? ರಾಜಕೀಯ ನಮ್ಮಲ್ಲಿ ಇಲ್ಲ. ರಾಜಕೀಯ ನಿಮ್ಮಲ್ಲೇ ಇರಬೇಕು.

ಶ್ರೀ ಬಾಪೂಗೌಡ ದರ್ಶನಾಪುರ.—ನೀವೇನು ರಾಜಕೀಯ ಮಾಡುತ್ತಿದ್ದೀರಿ ಎಂದು ನಾವು ಹೇಳುತ್ತೇನೆ.

ಶ್ರೀ ಗೋವಿಂದ ಪಿ. ಒಡೆಯರಾಜ್.—ಪ್ರಶ್ನೆ ಏನಿದೆ ಎಂದರೆ, ಸರ್ಕಾರದ ಮುಖ್ಯಮಂತ್ರಿಗಳು ಗೃಹಖಾತೆಯನ್ನು ಹೊಂದಿರತಕ್ಕಂಥವರು ಒಂದು ಸಲ ಸಿ.ಓ.ಡಿ. ತನಿಖೆಗೆ ಆರ್ಡರ್ ಮಾಡಿ ಏಕೆ ಹಿಂತೆಗೆದು ಕೊಂಡರು ಎಂಬುದು ಇಲ್ಲಿನ ಪ್ರಶ್ನೆ. ಮಾನ್ಯ ಮುಖ್ಯಮಂತ್ರಿಗಳು ಆವತ್ತು ಮಾತನಾಡುತ್ತಾ ಒಂದು ವಿಷಯವನ್ನು ಹೇಳಿದರು. ಪೋಲೀಸರು ಈ ಮರ್ಡರ್ ಕೇಸಿನಲ್ಲಿ ಎನ್‌ಕ್ವೈರಿ ಮಾಡುತ್ತಿದ್ದಾರೆ. ಸಿ.ಓ.ಡಿ. ತನಿಖೆಗೆ ಆರ್ಡರ್ ಆಗುವುದರೊಳಗೆ ಪೋಲೀಸರು ತನಿಖೆ ಮುಗಿಸಿದ್ದರು. ಆದ್ದರಿಂದ ಸಿ.ಓ.ಡಿ. ತನಿಖೆ ಅನಾವಶ್ಯಕ ಎನ್ನುತಕ್ಕಂಥ ಮಾತನ್ನು ಮಾನ್ಯ ಮುಖ್ಯಮಂತ್ರಿಗಳು ಹೇಳಿದರು. ನಾವು ಆಬ್ಜೆಕ್ಷನ್ ತೆಗೆದುಕೊಂಡಿರುವುದು ಅಲ್ಲೇನೆ. ಮಾನ್ಯ ಆಚಾರ್ಯ ಅವರು ಉಲ್ಲೇಖ ಮಾಡಿದ ಅನೇಕ ಕೇಸಂಗಳಲ್ಲಿ ಚಾರ್ಜ್‌ಶೀಟ್ ಫೈಲ್ ಮಾಡಿದ ಮೇಲೆ ಸಿ.ಓ.ಡಿ. ತನಿಖೆ ಮಾಡಿದ್ದಾರೆ ಕ್ರಿಮಿನಲ್ ಪ್ರೊಸಿಜರ್ ಕೋಡ್ ಸೆಕ್ಷನ್ ೧೭೩(೮)ರಲ್ಲಿ ಹೀಗೆ ಹೇಳಿದೆ.—

> Under Section 173(8) if the Criminal Procedure Code further investigation could be conducted even after the filing of charge-sheet, addition or deletion of the name could be made in a charge-sheet on the strength of the investigation report and subsequent charge-sheet can

be filed. Hence there is no substance in C.M.'s reply that the limitation of 60 days for filing the charge-sheet bars further enquiry.

ಇದರಲ್ಲಿ ಪೋಲೀಸಿನವರು ತಮ್ಮ ಕರ್ತವ್ಯವನ್ನು ಸರಿಯಾಗಿ ನಿರ್ವಹಣೆ ಮಾಡಿಲ್ಲ ಎನ್ನತಕ್ಕಂಥ ಆಪಾದನೆ ನಮ್ಮೆಲ್ಲರದ್ದು ಇದೆ ; ಸಾರ್ವಜನಿಕರದ್ದು ಇದೆ. ಇಲ್ಲಿ ಕ್ರಿಮಿನಲ್ ಪ್ರೊಸಿಜರ್ ಕೋಡ್ ಪ್ರಕಾರ ಚಾರ್ಜ್ ಶೀಟ್ ಫೈಲ್ ಮಾಡಿದರೂ ಕೂಡ ಸಿ.ಓ.ಡಿ. ಎನ್‌ಕ್ವೈರಿ ಮಾಡುವುದಕ್ಕೆ ಸಾಧ್ಯ ಇದೆ. ಹೀಗಿರುವಾಗ ಇದನ್ನು ಏತಕ್ಕೆ ಮಾಡಬಾರದು ? ಇದಕ್ಕೆ ಪ್ರಬಲವಾದ ಕಾರಣ ಏನಿದೆ ?

ಅಧ್ಯಕ್ಷರು.—ಅವರು ಉತ್ತರ ಹೇಳುತ್ತಾರೆ ಬಿಡಿ.

ಶ್ರೀ ಗೋವಿಂದ ಪಿ. ಒಡೆಯರಾಜ್.—ಅವರು ಸರಿಯಾಗಿ ಉತ್ತರ ಹೇಳುವುದಿಲ್ಲ ಅಧ್ಯಕ್ಷರೇ, ಈ ಸದನದಲ್ಲಿ ಪದೇಪದೇ ಇದೇ ತಪ್ಪನ್ನು ನಾವು ರಿಪೀಟ್ ಮಾಡುತ್ತಿದ್ದೇವೆ. ಚಾರ್ಜ್‌ಶೀಟ್ ಫೈಲ್ ಮಾಡಿದ ಮೇಲೂ ಕೂಡ ಸಿ.ಓ.ಡಿ. ಎನ್‌ಕ್ವೈರಿ ಮಾಡುವುದಕ್ಕೆ ಬರುವಾಗ ನಾನು ಹೇಳುತ್ತೇನೆ. ಸರ್ಕಾರದವರು ಸಿ.ಓ.ಡಿ. ತನಿಖೆಯನ್ನು ಏತಕ್ಕೆ ಮಾಡಬಾರದು ? ತಪ್ಪಿತಸ್ಥರು ಯಾರೇ ಆಗಿರಲಿ. ಈಗ ತಾನೇ ಅನೇಕ ಮಂನವಿಗಳನ್ನು ಕೊಟ್ಟಿರುವುದನ್ನು ನಾನು ಉಲ್ಲೇಖ ಮಾಡಿದ್ದೇನೆ. ರುದ್ರೇಗೌಡ ಅಮೀನಗೌಡ ಮತ್ತು ಅನೇಕ ಸಾರ್ವಜನಿಕರು ಮಂನವಿಗಳನ್ನು ಕೊಟ್ಟಿದ್ದಾರೆ. ಅದನ್ನು ನಾನು ಓದುವುದಕ್ಕೆ ಹೋಗುವುದಿಲ್ಲ. ಇದು ಸರ್ಕಾರದ ಗಮನಕ್ಕೆ ಬಂದಿದೆ. ಸರ್ಕಾರಕ್ಕೆ, ಮಾನ್ಯ ಮುಖ್ಯ ಮಂತ್ರಿಗಳಿಗೆ ಬರೆದುಕೊಂಡಿರುವ ಮಂನವಿಗಳು ಇದಾಗಿವೆ. ಸಾರ್ವಜನಿಕವಾಗಿ ಇರುವ ಮನವಿಯೆಂದರೆ ಈ ವಿಷಯದಲ್ಲಿ ಸಿ.ಓ.ಡಿ. ತನಿಖೆಯ ಅವಶ್ಯಕತೆ ಇದೆಯೆಂಬಂದು. ಮಾನ್ಯ ಅಧ್ಯಕ್ಷರೇ, ಈಗ ಏನಾಗಿದೆ ಎಂದರೆ, ಈ ವಂರ್ಡರ್ ಕೇಸಿನ ಪರಿಣಾಮ ಶಹಾಪುರ ತಾಲ್ಲೂಕಿನ ಲಾ ಅಂಡ್ ಆರ್ಡರ್ ವ್ಯವಸ್ಥೆ ಮೇಲೆ ಆಗಿದೆ. ಅಲ್ಲಿನ ಜನರು ನಮ್ಮ ಮೇಲೆ ಅನ್ಯಾಯ ಆಗುತ್ತಿದೆ. ನಾವು ಯಾರ ಹತ್ತಿರ ರಕ್ಷಣೆ ಕೇಳಿ ಹೋಗೋಣ ಎಂದು ಕೇಳುತ್ತಿದ್ದಾರೆ. ಸರ್ಕಾರದವರು ರಕ್ಷಣೆ ಕೊಡುವುದಕ್ಕೆ ಸಾಧ್ಯವಿಲ್ಲ. ಪೋಲೀಸಿನವರು ಅಧಿಕಾರದಲ್ಲಿರತಕ್ಕಂಥವರ ಮಾತನ್ನು ಕೇಳಿಕೊಂಡು, ಅವರ ಆಜ್ಞೆಯನ್ನು ಪರಿಪಾಲನೆ ಮಾಡಿಕೊಂಡು.....

ಅಧ್ಯಕ್ಷರು.—ಬೇಗ ಮುಗಿಸಿ.

ಶ್ರೀ ಗೋವಿಂದ ಪಿ. ಒಡೆಯರಾಜ್.—ಅಧ್ಯಕ್ಷರೇ. ಇದು ಬಹಳ ಗಂಭೀರವಾದ ಪ್ರಶ್ನೆ. ಯಾವ ಮಾತನ್ನು ಈಗ ಹೇಳುತ್ತಿದ್ದೇವೋ ಅದನ್ನು ಮುಂತ್ತೇ ಹೇಳಬೇಕಾದ ಪ್ರಸಂಗ ಬರಬಹುದು. ಸರ್ಕಾರದವರು ಏನಾದರೂ ನಿಷ್ಪಕ್ಷಪಾತವಾದ ತನಿಖೆ ಮಾಡಬೇಕೆಂದು ಇದ್ದರೆ, ಶಹಾಪುರದಲ್ಲಿ ಕೊಲೆಗಳ ಪ್ರಮಾಣ ಕಡಿಮೆ ಮಾಡಬೇಕೆಂದು ಇದ್ದರೆ ಯೋಚನೆ ಮಾಡಬೇಕು. ನಾವು ಇಲ್ಲಿ ಚರ್ಚೆ ಮಾಡತಕ್ಕಂಥ ಉದ್ದೇಶ ಅಲ್ಲಿ ತಿಳಿಯಾದ ವಾತಾವರಣ ಆಗಬೇಕೆಂದು ಅಲ್ಲ. ನಾವು ಬಾಪೂಗೌಡರ ಮೇಲೆ ಆಪಾದನೆ ಮಾಡಬೇಕೆಂದು ಇಲ್ಲಿ ನಿಂತಿಲ್ಲ. ನಮ್ಮ ಪ್ರಶ್ನೆ ಎಂದರೆ ಶಹಾಪುರ ತಾಲ್ಲೂಕಿನಲ್ಲಿ ಕೊಲೆಗಳು ಜಾಸ್ತಿ ಯಾಗುತ್ತಿವೆ. ಏವೂರಂ ವಂರ್ಡರ್ ಕೇಸು ಬೇರೆ ರೀತಿಯಲ್ಲಿ ಪರಿಣಾಮ ಬೀರುತ್ತಿದೆ. ಇದನ್ನು ಹೇಗೆ ತಡೆಯುತ್ತೀರಿ ? ಆದ್ದರಿಂದ ಸರ್ಕಾರದವರು ಈ ಗಂಭೀರವಾದ ವಿಷಯವನ್ನು ಅರ್ಥ ಮಾಡಿಕೊಂಡು ಸಿ.ಓ.ಡಿ. ತನಿಖೆಯನ್ನು ಮಾಡಿಸಿದರೆ ಸರ್ಕಾರಕ್ಕೂ ಶ್ರೇಯಸ್ಸು ಇರುತ್ತದೆ. ಮುಂತ್ತು ಇದರಿಂದ ಸಕ್ಯಾಂಶ ಏನೆಂಬುದು ಹೊರಗೆ ಬರುತ್ತದೆ.

ಅಧ್ಯಕ್ಷರು.—ಸಿ.ಓ.ಡಿ. ತನಿಖೆ ಆಗಬೇಕೆಂದು ಎಷ್ಟು ಸಲ ಹೇಳಿದ್ದನ್ನೇ ಹೇಳುತ್ತೀರಿ ? ಈಗಾಗಲೇ ನಾಲ್ಕಾರು ಸಲ ಹೇಳಿದ್ದೀರಿ.

ಶ್ರೀ ಗೋವಿಂದ ಪಿ. ಒಡೆಯರಾಜ್.—ಮಾನ್ಯ ಅಧ್ಯಕ್ಷರೇ, ನಾವು ಹೇಳಿದರೆ, ನಾವು ಹೇಳಿದರೆ ಅವರು ಒಪ್ಪಿಕೊಳ್ಳುವುದಿಲ್ಲ. ಇದರ ಹಿನ್ನಲೆ ಏನು, ಅಡಕವಾಗಿರತಕ್ಕಂಥ ಗಂಭೀರತೆಯನ್ನು ಅರ್ಥ ಮಾಡಿಕೊಳ್ಳಬೇಕೆಂದು ಒತ್ತಾಯಪೂರ್ವಕವಾಗಿ ಹೇಳಬೇಕಾಗಿದೆ. ಆದ್ದರಿಂದ ನಾನು ಮುಂತ್ತೊಮ್ಮೆ ಒತ್ತಾಯಪೂರ್ವಕವಾಗಿ ಸರ್ಕಾರಕ್ಕೆ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಏನೆಂದರೆ ಈ ಕೇಸಿನಲ್ಲಿ ಸಿ.ಓ.ಡಿ. ತನಿಖೆಯನ್ನು ತಕ್ಷಣ ಮಾಡಬೇಕು. ಇದರಿಂದ ಎಲ್ಲರಿಗೂ ಅನುಕೂಲ ಆಗುತ್ತದೆ ಮತ್ತು ಶಹಪುರದಲ್ಲಿ ಕಾನೂನು ಮುಂತ್ತು ಸುಭದ್ರತೆ ನೆಲೆಸಲಿಕ್ಕೆ ಸಾಧ್ಯವಾಗುತ್ತದೆ.

ಶ್ರೀ ಬಾಪುಗೌಡ ದರ್ಶನಾಪುರ (ಸರ್ಕಾರಿ ಮುಖ್ಯ ಸಚೇತಕ).— ಅಧ್ಯಕ್ಷರೇ, ಈ ವಿಷಯದಲ್ಲಿ ಮತ್ತು ಮೇಲ್ಮನೆಯಲ್ಲಿ ಸುಮಾರು ಎರಡು ತಿಂಗಳಿನಿಂದ ಪ್ರತ್ಯಕ್ಷ ಮತ್ತು ಅಪ್ರತ್ಯಕ್ಷವಾಗಿ ನನ್ನ ಮೇಲೆ ಕೆಲವು ಹೇಳಿಕೆಗಳು ಪತ್ರಿಕೆಗಳಲ್ಲಿ ಹಾಗೂ ಶಾಸಕರಿಂದ ಬಂದಂಥ ಕರ ಪತ್ರಗಳಿಂದ ಮತ್ತು ಅದರಲ್ಲೂ ವಿಶೇಷವಾಗಿ ಈ ಬಗ್ಗೆ ನಮ್ಮ ಬಿಜೆಪಿ ಸ್ನೇಹಿತರು ತೆಗೆದುಕೊಂಡಂಥ ಆಸಕ್ತಿಯನ್ನು ನೋಡಿದರೆ ಇದರ ಹಿಂದೆ ಒಂದು ಹಿನ್ನೆಲೆ ಇದೆಯೆಂದು ನನಗನ್ನಿಸುತ್ತದೆ. ಇಲ್ಲಿ ಎರಡು ಪ್ರಕರಣಗಳು ಇವೆ. ಒಂದು, ವಿಭೂರಿನ ಸಿದ್ದನಗೌಡರ ಕೊಲೆಯಾದ ಪ್ರಕರಣ. ಇನ್ನೊಂದು ಶಹಾಪುರ ತಾಲ್ಲೂಕು ಕಂಚಿನಗವಿ ಪ್ರಕರಣ. ವಿಭೂರು ಇರುವುದು ಶಿವಪುರ ತಾಲ್ಲೂಕಿನಲ್ಲಿ. ವಿಭೂರು ಗ್ರಾಮ ಸುಮಾರು ಮತ್ತು ೪೦ ಹಳ್ಳಿಗಳು ನನ್ನ ಮತದಾರ ಕ್ಷೇತ್ರಕ್ಕೆ ಸೇರಿವೆ. ಈ ಮತದಾರ ಕ್ಷೇತ್ರದಿಂದಲೇನಾನು ವಿಧಾನಸಭೆಯ ಸದಸ್ಯನಾಗಿ ಆರಿಸಿ ಬರುತ್ತಿದ್ದೇನೆ. ವಿಭೂರಿನಲ್ಲಿ ಕೊಲೆಯಾದ ಸಿದ್ದನಗೌಡ ಮತ್ತು ಸಂಬಂಧಿಕರು ಕೆಲವು ಮಂದಿ ಹಾಗೂ ಹದ್ದಿನೂರಲ್ಲಿ, ವಂಟ್ಲಿಗಲ್ಲಿ, ಯಾಲ್ಗಿಯಲ್ಲಿನ ಒಂದು ಗುಂಪು. ಭೀಮನಗೌಡ ದೇಸಾಯಿ ಗೌಡಪ್ಪಗೌಡ ಅವರು ಒಂದು ಗುಂಪು. ಈ ಗುಂಪು ಸುಮಾರು ೩೫ ವರ್ಷಗಳಿಂದ ಸತತವಾಗಿ ತಮ್ಮದೇ ಆದಂಥ ಪ್ರಭಾವ ಬೀರುತ್ತಿದೆ. ಈ ಎರಡೂ ಗುಂಪಿನ ನಡುವೆ ಸುಮಾರು ೫೦ ಕ್ರಿಮಿನಲ್ ಕೇಸುಗಳು ಇವೊತ್ತು ಕೆಂಬಾವಿ ಪೋಲೀಸ್ ಸ್ಟೇಷನ್ನಿನಲ್ಲಿ, ದಿಜಾವುರದ ಪೋಲೀಸ್ ಸ್ಟೇಷನ್ನಿನಲ್ಲಿ ಮತ್ತು ಶಹಾಪುರ ಪೋಲೀಸ್ ಸ್ಟೇಷನ್ನಿನಲ್ಲಿ ಇವೆ. ಇವರ ಎರಡು ಗುಂಪಿನ ನಡುವೆ ಭೀಮನಗೌಡ ದೇಸಾಯಿ, ಗೌಡಪ್ಪಗೌಡ ಒತ್ತಟ್ಟಿಗಿ, ಶಾಂತಗೌಡ, ಬಸಪ್ಪಗೌಡ ಈ ಗುಂಪು ಸುಮಾರು ೩೫ ವರ್ಷಗಳಿಂದ ತಮ್ಮದೇ ಆದಂಥ ಒಂದು ಧಾಟಿಯಲ್ಲಿ ಸಾಕಷ್ಟು ಪ್ರಭಾವ ಬೀರಬೇಕು ಎನ್ನುವ ದೃಷ್ಟಿಯಿಂದ ಸಾಕಷ್ಟು ಘರ್ಷಣೆಗಳಾಗಿದ್ದು, ವಾರ್ಡರ್‌ಗಳಾಗಿದ್ದು ಇವೊತ್ತು ಸುಮಾರು ೫೦-೬೦ ಕೇಸುಗಳು ಕೆಂಬಾವಿ ಪೋಲೀಸ್ ಸ್ಟೇಷನ್ನಿನಲ್ಲಿವೆ. ಇದು ಕೇವಲ ಬಾಪುಗೌಡರಿಗೆ ಮಾತ್ರವಲ್ಲ ಖಾರ್ಗೆಯವರಿಗೆ, ವಿಶ್ವನಾಥರೆಡ್ಡಿಯವರಿಗೆ ಸಹಾ ಗೊತ್ತು. ಈ ಹಂತದಲ್ಲಿ ಸುಮಾರು ನಾಲ್ಕು ವರ್ಷಗಳಿಂದ ಭೀಮನಗೌಡ ದೇಸಾಯಿ, ಯಾರೂ ಇವೊತ್ತು ಆರೋಪಿಯಾಗಿದ್ದಾರೆ, ಗೌಡಪ್ಪಗೌಡ ಹಾಗೂ ಅವರ ಅಳಿಯಂದಿರು ಇದ್ದಾರೆ ಹಾಗೂ ಸತ್ಕಂತ ಸಿದ್ದನಗೌಡ ಎಲ್ಲರೂ ವಿಭೂರಿನವರು. ಇವೊತ್ತು ಶ್ರೀವಾನ್ ವಿಶ್ವನಾಥ ರೆಡ್ಡಿಯವರಂ ಹೋಗಿ ಕೆಲವು ಮಾತುಗಳನ್ನು ಕೇಳಬೇಕಾಗುತ್ತಿತ್ತು. ಇವೊತ್ತು ವೈಯಕ್ತಿಕವಾಗಿ ನನ್ನ ನೈತಿಕ ಮಟ್ಟದ ಮೇಲೆ ಹಲ್ಲೆ ಮಾಡತಕ್ಕಂಥ ಪ್ರಯತ್ನ ವಿನಂ ಮಾಡಿದ್ದಾರೆ ಇದರಿಂದಾಗಿ ನಾನು ಸ್ಪಷ್ಟವಾಗಿ ಈ ಬಗ್ಗೆ ಹೇಳುತ್ತೇನೆ. ಇವೊತ್ತು ಇವರು ಒತ್ತಟ್ಟಿಗೆ ಕೂಡಬೇಕೆಂದು ಸುಮಾರು ವಾಲ್ಮ ವರ್ಷಗಳಿಂದ ಪ್ರಯತ್ನ ಮಾಡಿದರು. ಶ್ರೀವಾನ್ ವಿಶ್ವನಾಥ ರೆಡ್ಡಿಯವರು, ಭೀಮನಗೌಡ ದೇಸಾಯಿ, ಸತ್ಕಂತ ಸಿದ್ದನಗೌಡ, ಗೌಡಪ್ಪಗೌಡ ಇವರು ಸಣ್ಣ ಮಂದಿ ಅಲ್ಲ, ಅವರು ದೊಡ್ಡ ಮಂದಿ. ಇವರನ್ನು ಒತ್ತಟ್ಟಿಗೆ ಕೂಡಿಸಿ, ಫೋಟೋ ತೆಗೆಸಬೇಕಾಗಿತ್ತು. ಇದಾದ ನಂತರ ಕೆಲವು ಘಟನೆಗಳಾಯಿತು. ಕಡೆಗೆ ಏನಾಯಿತು ಅಂದರೆ ಸುಮಾರು ೪೦-೫೦ ಹಳ್ಳಿಗಳಲ್ಲಿ ಕಲ್ಮಶ ವಾತಾವರಣವಾಯಿತು. ನಾನು ವಿರೋಧಪಕ್ಷದ ಕಡೆಯಲ್ಲಿದ್ದಾಗ ಅಲ್ಲಿ ಚಂದಾವರ್ಕರ್ ಅನ್ನತಕ್ಕಂಥ ಡೆಪ್ಯುಟಿ ಕಮಿಷನರ್ ಇದ್ದರು. ನಾನು ಅವರಿಗೆ ಆಗ ಪತ್ರ ಬರೆದೆ. ರಾಯಪ್ಪಗೌಡ ಬಸಪ್ಪಗೌಡ ಒತ್ತಟ್ಟಿಗಿ ಒಂದು ಗುಂಪು. ಭೀಮನಗೌಡ ದೇಸಾಯಿ, ಚೆನ್ನಾರೆಡ್ಡಿ ಒಂದು ಗುಂಪು. ಈ ಗುಂಪನ್ನು ಜಿಲ್ಲೆಯಿಂದ ಹೊರಗೆ ಕಳುಹಿಸಬೇಕೆಂದು ನಾನಂ ಪತ್ರ ಬರೆದೆ. ಪತ್ರ ಹೋಯಿತು, ಕೇಸು ತನಿಖೆಯಾಯಿತು. ಆ ಬಗ್ಗೆ ಪ್ರೂಫ್ ಸಿಕ್ಕಿತು. ಚಂದಾವರ್ಕರ್ ಇನ್ನೇನು ಇವರನ್ನು ಗಡಿಪಾರು ಮಾಡಬೇಕು ಎನ್ನುವ ಆಜ್ಞೆ ಹೊರಡಿಸಿದ್ದರು. ಆ ಕಾಲಕ್ಕೆ ಅವರು ಎಲ್ಲಾ ಒಟ್ಟಿಗೆ ಕೂಡಿದರು. ನಾವು ಎಲ್ಲಾ ಒಟ್ಟಿಗೆ ನೆಮ್ಮದಿಯಿಂದ ಇರುತ್ತೇವೆ ನೀವು ಬಂದು ಹೇಳಬೇಕು ಎಂದು ಅವರು ಕೇಳಿಕೊಂಡಾಗ ನಾನು ಮತ್ತು ವಿಶ್ವನಾಥರೆಡ್ಡಿಯವರು ಹಾಗೂ ಇತರ ಪ್ರಮುಖರು ಬಂದು ಚಂದಾವರ್ಕರ್‌ಗೆ ಹೇಳಿದೆವು. ಇವರು ಎಲ್ಲಾ ಒಟ್ಟಿಗೆ ಇರುತ್ತಾರೆ, ನೆಮ್ಮದಿಯಿಂದ ಇರುತ್ತಾರೆ, ಸುಖವಾಗಿ ಇರುತ್ತಾರೆ ಎಂದು ಹೇಳಿದೆವು. ಇವರಿಂದ ಅಲ್ಲಿ ಗ್ರಾಮಾಂತರ ಜನರಿಗೆ ಏನಂ ತೊಂದರೆಯಾಗಿತ್ತು ಆ ತರಹ ತೊಂದರೆ ಇನ್ನು ಮುಂದೆ ಆಗಬಾರದು ಎನ್ನುವಂಥ ಭರವಸೆ ಪಡೆದು ಚಂದಾವರ್ಕರ್ ಅವರು ಮಾಡಿದಂಥ ಗಡಿಪಾರು ಆಜ್ಞೆಯನ್ನು ಹಿಂತೆಗೆದುಕೊಂಡರು. ಇದಾದ ನಂತರ ಚುನಾವಣೆ ಬಂತು. ಚುನಾವಣೆ ಬಂದ ಕಾಲದಲ್ಲಿ ಏನು ಗುಂಪುಗಳು ಇವೆಯಲ್ಲಾ ಅವು...

ಶ್ರೀ ವಿ. ಎಸ್. ಆಚಾರ್ಯ.—ಸನ್ಮಾನ್ಯ ಅಧ್ಯಕ್ಷರೇ, ನಾವು ಕಥೆ ಕೇಳಲಿವುದಕ್ಕೆ ಇವೊತ್ತು ಬಂದಿಲ್ಲ. ಇವೊತ್ತು ಈ ನಿರ್ದಿಷ್ಟ ಪ್ರಕರಣದಲ್ಲಿ ಸಿಒಡಿ ತನಿಖೆಯಾಗಬೇಕು. ಅದರ ಬಗ್ಗೆ...

ಶ್ರೀ ಬಾಪೂಗೌಡ ದರ್ಶನಾಪುರ್.—ಅಧ್ಯಕ್ಷರೆ, ವಂಸಿಸ್ಸಿಗೆ ಬಂದಹಾಗೆ ಮಾತನಾಡಲಿಕ್ಕೆ ಆಗುತ್ತದೆಯೇ ? ಅವರು ವಿಷಯ ಪ್ರಸ್ತಾಪಿಸಿದ ಮೇಲೆ ನಾನೂ ಸಹ ಹೇಳುವುದನ್ನು ಅವರು ಕೇಳಬೇಕಾಗುತ್ತದೆ.

ಶ್ರೀ ವಿ. ಎಸ್. ಆಚಾರ್ಯ.—ಈಗ ಈ ಕೊಲೆಯಲ್ಲಿ ಬಾಪೂಗೌಡರ ಕೈವಾಡ ಇದೆಯೆಂದು ಹೇಳಿಲ್ಲ. ನಾನು ಹೇಳುವುದು ಏನೆಂದರೆ ಈ ಬಗ್ಗೆ ಸಿಒಡಿ ತನಿಖೆಯಾಗಬೇಕು.

(ಗೊಂದಲ)

ಶ್ರೀ ಬಾಪೂಗೌಡ ದರ್ಶನಾಪುರ್.—ನಾವು ಏನು ಕಥೆ ಹೇಳುವುದಕ್ಕೆ ಬಂದೀವಿ ಎಂದು ತಿಳಿದುಕೊಂಡಿದ್ದೀರಾ ?

ಶ್ರೀ ಬಿ. ಎಸ್. ಯಡಿಯೂರಪ್ಪ.—ಬಾಪೂಗೌಡರೇ, ನೀವು ದಯವಿಟ್ಟು ಏಕೆ ಸಿಟ್ಟಾಗುತ್ತೀರಿ.

(ಗೊಂದಲ)

ಅಧ್ಯಕ್ಷರು —ಬಾಪೂಗೌಡರ ಹೆಸರು ಬಂದಿದ್ದಕ್ಕೆ ಅವರು ವಿವರಣೆ ಕೊಡುತ್ತಿದ್ದಾರೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ವಿವರಣೆ ಕೊಡಲೀ ಬಿಡೀ ಸ್ವಾಮಿ, ನಾವು ಬೇಡ ಎಂದು ಹೇಳುವುದಿಲ್ಲ. ನಮ್ಮ ಪಕ್ಷದ ನಾಯಕರು ಕಥೆ ಹೇಳುವ ಅವಶ್ಯಕತೆ ಇಲ್ಲವೆಂದು ಹೇಳಿದ್ದಾರೆ. ತಾವು ಕಥೆ ಹೇಳುವುದಕ್ಕೆ ಅಲೋ ಮಾಡುವುದಾದರೆ ನಾವು ಇನ್ನೂ ಎರಡು ಮೂರು ಗಂಟೆಗಳ ಕಾಲ ಕುಳಿತು ಕೊಂಡು ಪೂರ್ಣ ಕಥೆ ಕೇಳುವುದಕ್ಕೆ ತಯಾರಿದ್ದೇವೆ. ಕಥೆ ಮುಂಗಿದ ಮೇಲೆ ಸಿಒಡಿ ತನಿಖೆ ಮಾಡೋಣ.

ಶ್ರೀ ಬಾಪೂಗೌಡ ದರ್ಶನಾಪುರ್.—ಇದಾದ ನಂತರ ಸ್ವಲ್ಪ ದಿವಸಕ್ಕೆ ಸಿದ್ದನಗೌಡರ ಮರ್ಡರ್ ಆಯಿತು. ಮರ್ಡರ್ ಯಾವಾಗ ಆಯಿತು ? ಮರ್ಡರ್ ಆದ ಕಾಲಕ್ಕೆ ನಾನು ಬೆಂಗಳೂರಿನಲ್ಲಿದ್ದೆ. ಆ ವ್ಯಕ್ತಿಯ ಸಂಬಂಧಿಕರೊಬ್ಬರು ನನ್ನ ಹತ್ತಿರ ಕೆಲಸ ಮಾಡುತ್ತಿದ್ದರು. ಮರ್ಡರ್ ಆದುದರ ಬಗ್ಗೆ ಟೆಲಿಗ್ರಾಂ ಬಂದರೂ ಕೂಡಾ ನಾನು ಆ ಜಾಗಕ್ಕೆ ಆ ಊರಿಗೆ ಭೇಟಿ ಕೊಟ್ಟಿಲ್ಲ. ಕೊಡುವುದೂ ಸರಿಯಲ್ಲವೆಂದೂ ತಿಳಿದುಕೊಂಡು ಅದೇ ದಿವಸ ನಾನು ಎಸ್.ಪಿ. ನಾರಾಯಣ್‌ಗೆ ಫೋನ್ ಮಾಡಿ, ಈ ಬಗ್ಗೆ ನೀವು ಕೇಸ್ ದಾಖಲು ಮಾಡಬೇಕು ಎಂದು ಹೇಳಿದೆ. ಇದಾದ ನಂತರ ಯಾರ ಹೆಸರು ಕರೆಸಿದರು ಭೀಮನಗೌಡ ಹೆಸರನ್ನು ಕರೆಸಿದರೇ ಅಥವಾ ಗೌಡಪ್ಪಗೌಡ ಹೆಸರು ಕರೆಸಿದರೇ ಯಾರ ಹೆಸರು ಕರೆಸಿದರು ಎಂಬ ಬಗ್ಗೆ ನಿರ್ದಿಷ್ಟವಾಗಿ ನನಗೆ ಗೊತ್ತಿಲ್ಲ. ಅರ್ಜಿ ಹೋಗಿ ಐ ವಿಟ್ನೆಸ್ ಆದ ನಂತರ ಲಿಂಗನಗೌಡ ದೇಸಾಯಿ ಅರ್ಜಿ ಕೊಟ್ಟಿದ್ದರು, ಅದಕ್ಕೆ ಅವರು ಬಂದರು. ಅವರು ಬಂದು ಹೀಗೆ ಆಗಿದೆಯೆಂದು ಹೇಳಿ ನಮ್ಮ ಅಣ್ಣನವರು ಇಲ್ಲ ಹಾಗೂ ನಮ್ಮ ಮಾವನೂ ಇಲ್ಲ ಎನ್ನುವ ಮಾತು ಹೇಳಿದರು. ನಾನು ಫೋನ್ ಮಾಡಿ ಹೇಳಿದೆ, ವಾಸ್ತವಿಕತೆ ಏನಿದೆ ಅದರ ಆಧಾರದ ಮೇಲೆ ಕೇಸ್ ಮಾಡಿ ಎಂದು ಹೇಳಿದ್ದೇನೆ. ಘಟನೆಯಾದುದು ಬಸ್ ಸ್ಟಾಂಡಿನ ಎದುರು, ಮುಂಜಾವೆ ೬ ೩೦ಕ್ಕೆ. ಗ್ರಾಮದ ಮುಂದಿದ್ದ ಬಸ್‌ಸ್ಟಾಂಡಿನಲ್ಲಿ ಕೊಲೆಯಾಯಿತು. ಆ ಕೊಲೆ ಯಾರು ಮಾಡಿದರು ? ಯಾರ ಹೆಸರನ್ನು ಬಳಸಿದರು ಎನ್ನುವುದು ನನಗೆ ಗೊತ್ತಿಲ್ಲ. ಅರ್ಜಿ ಕೊಟ್ಟ ನಂತರ ಭೀಮನಗೌಡ ದೇಸಾಯಿ, ಗೌಡಪ್ಪಗೌಡ ಅವರು ಅರ್ಜಿ ಕೊಟ್ಟಿದ್ದಾರೆ. ಈ ಬಗ್ಗೆ ಸಾಕ್ಷಿಗಳು ಆಗಿವೆ. ಎನ್‌ಕ್ವಯರಿಯನ್ನು ಸಬ್ ಇನ್ಸ್‌ಪೆಕ್ಟರ್ ಮಾಡುತ್ತಿದ್ದಾರೆ ಎನ್ನುವ ಸಮಾಚಾರ ಬಂತು. ಈ ಬಗ್ಗೆ ಯಾವ ರೀತಿಯ ಒತ್ತಡವನ್ನೂ ನಾನು ತಂದಿಲ್ಲ. ಯಾರು ಮುಖ್ಯಮಂತ್ರಿಗಳ ಹತ್ತಿರ ಹೋಗಿದ್ದಾರೆ ಎಂಬುದನ್ನು ನೀವು ವಿಚಾರ ಮಾಡಿ. ಯಾರು ಏನು ಮಾಡಿದ್ದಾರೆ ನೀವು ವಿಚಾರ ಮಾಡಿ. ನಾನೂ ಯಾರ ಬಳಿಯಲ್ಲೂ ಹೋಗಿಲ್ಲ. ಈ ಬಗ್ಗೆ ನಾನಾ ರೀತಿಯ ಪ್ರಯತ್ನಗಳನ್ನು ಮಾಡುತ್ತಿರುವ ಸಮಾಚಾರ ನನಗೆ ಬಂತು. ಈ ಘಟನೆಯ ಬಗ್ಗೆ ಐ ವಿಟ್ನೆಸ್ ಇದೆ. ಈ ಬಗ್ಗೆ ನಿಜವನ್ನು ಕಂಡುಹಿಡಿಯಿರಿ.

ಅಧ್ಯಕ್ಷರು.—ಬಾಪೂಗೌಡರೇ, ಈ ಬಗ್ಗೆ ನಿಮಗೆ ಸಂಬಂಧ ಇಲ್ಲ ಎಂದು ಹೇಳಿದ್ದೀರಲ್ಲಾ ಸುಮ್ಮನೆ ಏಕೆ ಮಾತನಾಡುತ್ತೀರಿ ?

ಶ್ರೀ ಬಾಪೂಗೌಡ ದರ್ಶನಾಪುರ್.—ನಾನು ಪೂರ್ಣ ವಿಷಯ ಹೇಳುತ್ತೇನೆ. ಕಡೆಗೆ ಏನಾಯಿತೆಂದರೆ, ಇದನ್ನು ಸಿಒಡಿಗೆ ಕಳುಹಿಸಿದರು. ಸುಮಾರು ೧೫ ದಿವಸಗಳ ಕಾಲ ಇವರೇ ಹೋಗಿದ್ದಾರೆ. ಇದನ್ನು ಸಿಒಡಿಗೆ ವಹಿಸಿದ್ದು ಯಾರು ? ಕಲ್ಬುರ್ಗಿಯಲ್ಲಿರತಕ್ಕಂಥ ವಿಪೂರು ಗ್ರಾಮದಿಂದ ಸುಮಾರು

೬೦೦ ಕಿಲೋಮೀಟರ್ ದೂರದಲ್ಲಿರುವ ಕರಂಬಳ್ಳಿ ಸಂಜೀವ ಶೆಟ್ಟರಿಗೆ ಮತ್ತು ಶ್ರೀಮಾನ್ ಆಚಾರ್ಯ ರವರಿಗೆ ಅದರ ಮೇಲೆ ಏನು ಉತ್ಸಾಹ ? ಏನು ಪ್ರೇಮದ ವಾತಾವರಣ ಇತ್ತೋ ನನಗೆ ಗೊತ್ತಾಗಿಲ್ಲ.

(ಗೊಂದಲ)

ಸತತವಾಗಿ ಇರತಕ್ಕಂಥ ವ್ಯಕ್ತಿಗಳ ಪೈಕಿ ಶ್ರೀ ಭೀಮನಗೌಡ ದೇಸಾಯಿ ಅವರ ತಮ್ಮ ಸುಮಾರು ೬ ವರ್ಷಗಳಿಂದ ಇಲ್ಲೇ ಇದ್ದಾನೆ. ಅವನು ತ್ರಿಭುವನ್ ಹೋಟೆಲ್‌ನಲ್ಲಿರುತ್ತಾನೆ. ಈತನು ಊರಿಗೆ ಹೋಗುವುದು ಕಡಿಮೆ. ವರ್ಷಂ ವರ್ಷಗಳಿಗೊಮ್ಮೆ ಊರಿಗೆ ಹೋಗುತ್ತಾನೆ. ಇಂತಹ ವ್ಯಕ್ತಿಯ ಪ್ರಭಾವ ಯಾವ ರೀತಿ ಇರುತ್ತದೋ ನನಗೆ ಗೊತ್ತಿಲ್ಲ. ಅವರು ಸ್ವಂತವಾಗಿ ಮುಖ್ಯಮಂತ್ರಿಗಳ ಹತ್ತಿರ ಹೋಗಿ ತನಿಖೆಯಾಗಬೇಕೆಂದು ಒತ್ತಾಯ ಮಾಡಿದ್ದಾರೆ ಅಷ್ಟಕ್ಕೆ ಕೇಸು ಮುಂಗಿಯದೆ ಈ ಬಗ್ಗೆ ಛಾರ್ಜ್‌ಶೀಟಾಗಿದೆ. ವಿಶೇಷವಾಗಿ ಛಾರ್ಜ್‌ಶೀಟ್ ಹಾಕತಕ್ಕ ಕಾಲದಲ್ಲಿ ಕೇಸನ್ನು ತಡೆಹಿಡಿಯುವುದಕ್ಕೆ ಮಾನ್ಯ ಕರಂಬಳ್ಳಿ ಸಂಜೀವಶೆಟ್ಟರು ಮತ್ತು ಡಾ॥ ಆಚಾರ್ಯ ಅವರು ಪ್ರಯತ್ನ ಮಾಡಿದರು ಎಂದು ನಾವು ನೇರವಾಗಿ ಆಪಾದನೆ ಮಾಡಬೇಕಾಗುತ್ತದೆ.

ಶ್ರೀ ಬಿ.ಎಸ್. ಯಡಿಯೂರಪ್ಪ .—ಅವರು ಇಲ್ಲಿ ಹೆಸರನ್ನು ಪ್ರಸ್ತಾಪ ಮಾಡುವುದು ಬೇಕಾಗಿಲ್ಲ.

ಈ ಬಗ್ಗೆ ತನಿಖೆ ಆಗಬೇಕೆಂದು ಗಣ್ಯಾಚಾರದ ದಳದ ತನಿಖೆಗೆ ಆಜ್ಞೆ ಮಾಡಿದವರು ಮುಖ್ಯ ಮಂತ್ರಿಗಳೇ. ನಂತರ ಅದನ್ನು ಕ್ಯಾನ್ಸಲ್ ಮಾಡಿದವರೂ ಅವರೇ. ಇದಕ್ಕೆ ಕಾರಣ ಏನು ? ಒಂದು ವೇಳೆ ಈ ಬಗ್ಗೆ ತನಿಖೆ ಮಾಡದೇ ಹೋದ ಮೇಲೆ ಇದನ್ನು ಅವರು ಹೇಳಬೇಕಾದ ಅವಶ್ಯಕತೆ ಇರಲಿಲ್ಲ. ಏತಕ್ಕೆ ಈ ಮಾತನ್ನು ಹೇಳಬೇಕಾಗಿತ್ತು ?

ಶ್ರೀ ಬಾಪುಗೌಡ ದರ್ಶನಾಪುರ್.—ಇಲ್ಲಿ ಏನು ಬೇಕಾದರೂ ಮಾತನಾಡಬಹುದೇ ? ಇದರ ಬಗ್ಗೆ ಸಿ. ಒ. ಡಿ. ತನಿಖೆ ಮಾಡಬೇಕೆಂದು ಆದೇಶ ನೀಡಿದ್ದು ನಿಜ ಆದರೆ...

(ಗೊಂದಲ)

ಅಧ್ಯಕ್ಷರು.—ಅವೆಲ್ಲಾ ಏತಕ್ಕೆ ಮಾತನಾಡಬೇಕು. ಈ ವಿಷಯಕ್ಕೂ ನನಗೂ ಸಂಬಂಧವಿಲ್ಲ ಎಂದು ಹೇಳಿದರಾಯಿತಲ್ಲ. ಮುಂದಿನ ಕಾರ್ಯಕಲಾಪಗಳಿಗೆ ಹೋಗೋಣ.

ಶ್ರೀ ಬಾಪುಗೌಡ ದರ್ಶನಾಪುರ್.—ಮಾನ್ಯ ಸದಸ್ಯರು ಹೇಳಿದ್ದಕ್ಕೆ ನಾನು ಸಮಜಾಯಿಷಿ ಕೊಡದೇ ಹೋದರೆ ನನ್ನ ಮೇಲೇನೇ ಅಪವಾದ ಆದಂತಾಗುತ್ತದೆ. ಆದುದರಿಂದ ನಾನು ಅದಕ್ಕೆಲ್ಲಾ ಉತ್ತರ ಹೇಳಬೇಕಲ್ಲ.

ಅಧ್ಯಕ್ಷರು.—ಅದಕ್ಕೂ ನನಗೂ ಸಂಬಂಧವಿಲ್ಲ ಎಂದು ಹೇಳಿಬಿಡಿ.

ಶ್ರೀ ಬಿ. ಎಸ್. ಯಡಿಯೂರಪ್ಪ —ಈಗ ಅವರು ಇದರ ಬಗ್ಗೆ ತನಿಖೆ ಮಾಡುವುದಕ್ಕೆ ಆಜ್ಞೆ ಮಾಡಿ ಅನಂತರ ಕ್ಯಾನ್ಸಲ್ ಮಾಡಿದುದನ್ನು ನೋಡಿದರೆ ತಾವು ಸರ್ಕಾರದ ಮೇಲೆ ಪ್ರಭಾವ ತಂದಿದ್ದೀರಿ ಅಂತ ಕಾಣುತ್ತದೆ. ಯಾರು ಈ ಕೊಲೆಗೆ ಕಾರಣರಾಗಿದ್ದಾರೋ ಅವರ ಬಗ್ಗೆ ಸಿ. ಒ. ಡಿ. ತನಿಖೆ ಆಗಬೇಕಾಗಿತ್ತು.

ಶ್ರೀ ಕೆ. ಜೆಜ್. ರಂಗನಾಥ್.—ಅವರು ಹೇಳುತ್ತಾ ಇರುವುದನ್ನು ನೋಡಿದರೆ ಮುಖ್ಯ ಮಂತ್ರಿಗಳೇ He has become the pawn in the hands of these people ಅನ್ನುವ ಅರ್ಥ ಬರುತ್ತದೆ. ಇದು ಛಾರ್ಜ್‌ಶೀಟ್ ಹಾಕುವ ಪರಿಸ್ಥಿತಿಗೆ ಬಂದಿತ್ತು ನಂತರ ಅವರೇ ಇದನ್ನು ನಿಲ್ಲಿಸಿದರು ಎಂದರೆ ಇದು ಕಲ್ಪನೆಯಾಗುತ್ತದೆ. ಅಲ್ಲದೆ ಇಂಥಾ ಪ್ರಕರಣಗಳು ಬಂದಾಗ ಕಾನೂನು ಪ್ರಕಾರವೂ ನಡೆಯುತ್ತಾ ಇಲ್ಲ ಅನ್ನುವ ಅರ್ಥ ಬರುತ್ತದೆ. ಆದುದರಿಂದ ಈ ವಿಷಯದಲ್ಲಿ ನಾವು ತಿಳಿದುಕೊಳ್ಳಬೇಕಾದ್ದು ಏನೆಂದರೆ ಈ ರೀತಿಯಾಗಿ ಛಾರ್ಜ್‌ಷೀಟ್ ಅನ್ನು ವಾಪಸ್ ತೆಗೆದು ಕೊಂಡಿರುವುದನ್ನು ನೋಡಿದರೆ This amply proves that the government is in the hands of politicians ಅನ್ನುವ ಅರ್ಥ ಬರುತ್ತದೆ.

ಅಧ್ಯಕ್ಷರು.—ಈ ವಿಷಯಕ್ಕೆ ಸಂಬಂಧಪಟ್ಟದ್ದು ಇದ್ದರೆ ಮಾತ್ರ ಹೇಳಿ.

ಶ್ರೀ ಬಾಪೂಗೌಡ ದರ್ಶನಾಪುರ.—ಇದು ಡಿಲೇ ಆಗಿರುವುದರಿಂದ ಇದರಲ್ಲಿ ನನ್ನ ಹೆಸರು, ನನ್ನ ಹೆಂಡತಿ ಹೆಸರು, ನನ್ನ ಅಣ್ಣನ ಹೆಸರು, ನನ್ನ ಅಣ್ಣನ ಹೆಂಡತಿ ಹೆಸರು ಹೀಗೆ ನನ್ನ ಸಂಬಂಧಿಕರ ಹೆಸರನ್ನು ತಂದಿರುವುದರಿಂದ ನಾನು ಪೂರ್ತಿಯಾಗಿ ಇದರ ಬಗ್ಗೆ ವಿವರಣೆ ಹೇಳಲೇಬೇಕಾಗುತ್ತದೆ. ಮಾನ್ಯ ಸದಸ್ಯರು ಸರಿಯಾಗಿ ತಿಳಿಯದೇ ನೇರವಾಗಿ ಈ ರೀತಿ ಆರೋಪ ಮಾಡಬಾರದು. ಇದೇ ಏಪೂರ್ ಗ್ರಾಮದಲ್ಲಿ ಏನು ಕೊಲೆಯಾಯಿತು ಅದಕ್ಕೂ ನನಗೂ ಸಂಬಂಧವಿಲ್ಲ. ತಮಗೆ ಹೇಳಬೇಕಾದರೆ ಷಹಾಪುರ್ ತಾಲ್ಲೂಕಿನಲ್ಲಿ ಕಂಚಿಟಗೆರೆ ಅನ್ನುವ ಗ್ರಾಮ ಇದೆ. ಅದು ನನ್ನ ಊರಿಗೆ ಸೇರಿದ ಹಾಗೆ ಇದೆ. ಅದು ಒಂದು ಸಣ್ಣ ಗ್ರಾಮ. ಆ ಗ್ರಾಮದಲ್ಲಿ ಅಮೀನ್‌ರೆಡ್ಡಿ ಮತ್ತು ಮಾಣಿಕ್ಯಗೌಡ ಎಂದು ಏನು ಇದ್ದಾರೆ ಇವರಿಬ್ಬರೂ ಕೂಡ ಒಂದೇ ತಾಯಿಯ ಗರ್ಭದಲ್ಲಿ ಹುಟ್ಟಿದವರು. ಅವರಿಗೆ ೪ ಮಂದಿ ಮಕ್ಕಳು ಇದ್ದಾರೆ. ಅವರ ಮಕ್ಕಳ ಮೇಲೆ ಕೊಡ್ಲಿಯಲ್ಲಿ ಹೊಡೆಯುವುದಕ್ಕೆ ಹೋಗಿದ್ದಾರೆ. ಮತ್ತು ಸಂಗನಗೌಡ, ಮಾಣಿಕ್ಯಗೌಡ ಇವರ ಕೈ ಕಾಲುಗಳನ್ನು ಮುರಿದಿದ್ದಾರೆ. ಈಗಾಗಲೇ ಇದರ ಬಗ್ಗೆ ೨೦-೨೫ ಮೊಖದ್ದಮೆಗಳು ಅವರ ಮೇಲೆ ಇದೆ. ಅವನ ಮನೆ ಸುಟ್ಟಿದ್ದಾರೆ. ಇವರು ಇಲ್ಲ ಎಂದು ಹೇಳುತ್ತಾರೆ. ಇವೆಲ್ಲ ಸುಳ್ಳು ಸಂದ್ದಿ ಎಂದು ಹೇಳುತ್ತಾರೆ. ಇದರ ಬಗ್ಗೆ ತನಿಖೆಯಾಗಬೇಕೆಂದು ಅವರ ಪರವಾಗಿ ಬಾಪೂಗೌಡರು ಕೆಲಸ ಮಾಡಿದ್ದಾರೆ. ಬಾಪೂಗೌಡರು ಯಾರು ಅವರ ಚರಿತ್ರೆ ಇವೆಲ್ಲಾ ಆ ಊರಿನವರಿಗೆ ಚೆನ್ನಾಗಿ ಗೊತ್ತಿದೆ. ಅದನ್ನು ತಿಳಿದುಕೊಂಡು ಮಾತನಾಡಬೇಕು. ಆದುದರಿಂದ ಮಾನ್ಯ ಸದಸ್ಯರು ಈಗ ಹೇಳುವುದನ್ನು ನಾನು ಒಪ್ಪುವುದಿಲ್ಲ. ಬೇಕಾದರೆ ಈ ಸದನದ ಸಮಿತಿಯಂ ಸದಸ್ಯರ ಒಂದು ಸಮಿತಿಯನ್ನು ಇದರ ಬಗ್ಗೆ ತನಿಖೆ ಮಾಡುವುದಕ್ಕೆ ನೇಮಿಸಿದರೆ ನಾನು ಅದನ್ನು ಎದುರಿಸುವುದಕ್ಕೆ ತಯಾರಾಗಿದ್ದೇನೆ. ರಾಜಕೀಯ ಜೀವನದಲ್ಲಿರತಕ್ಕಂಥಾ ವ್ಯಕ್ತಿಗಳ ಮೇಲೆ ಶಾಸಕರ ಚರಿತ್ರೆಯನ್ನು ತಿಳಿದುಕೊಳ್ಳದೆ ಮಾತನಾಡಿದರೆ ಅದು ಸರಿಯಲ್ಲ. ಅಲ್ಲದೆ ಹೀಗೆ ಮಾತನಾಡಿ ಒಬ್ಬರು ಮತ್ತೊಬ್ಬರನ್ನು ತೇಜೋವಧೆ ಕೆಲಸ ಮಾಡುವುದಕ್ಕೆ ಹೋಗಬಾರದು. ಹಾಗೆ ಮಾಡಿದರೆ ನಿಜವಾಗಿಯೂ ಕೂಡ ನಾಚಿಕೆ ಪಡಬೇಕಾಗುತ್ತದೆ. ಕಂಚಿಟಗೆರೆ ಗ್ರಾಮದಲ್ಲಿ ಬಾಪೂಗೌಡರು ಪೋಲೀಸರ ಪ್ರಭಾವ ಬೀರಿ ಇಡೀ ತಾಲ್ಲೂಕಿನಲ್ಲಿ ಲಾ ಅಂಡ್ ಆರ್ಡರ್ ಸಿಚುಯೇಷನ್ ತರುವ ಹಾಗೆ ಮಾಡಿದರು ಎಂದು ಶ್ರೀಮಾನ್ ಗೋವಿಂದ್ ಪಿ. ಒಡೆಯರಾಜ್ ಅವರು ಏನು ಹೇಳಿದರು ಆ ಬಗ್ಗೆ ತನಿಖೆ ಮಾಡುವುದಕ್ಕೆ ನಾನೂ ಮೊದಲೇ ಹೇಳಿದ ಹಾಗೆ ಈ ಸದನದ ಸದಸ್ಯರ ಒಂದು ಸಮಿತಿ ಮಾಡಲಿ. ಅದನ್ನು ಎದುರಿಸುವುದಕ್ಕೆ ನಾನು ತಯಾರಾಗಿದ್ದೇನೆ. ಇದು ಸುಳ್ಳು ಆದರೆ ಯಾರು ಆ ಬಗ್ಗೆ ಕರವತ್ರ ಕೊಟ್ಟಿದ್ದಾರೆ, ಯಾರು ಅವರ ಪರ ವಕಾಲತ್ತು ಮಾಡಿದ್ದಾರೆ ಅವರನ್ನು ಗುರುತಿಸಿ ಶಿಕ್ಷೆ ಕೊಡಲಿ. ಆದುದರಿಂದ ಅವರು ಹೇಳಿದ ಮಾತು ಸತ್ಯಕ್ಕೆ ದೂರವಾದುದು ಎಂದು ಹೇಳುತ್ತೇನೆ. ಅಲ್ಲದೆ ಈಪೊತ್ತು ಈ ಪವಿತ್ರವಾದ ಮನೆಯಲ್ಲಿ ಯಾವುದೇ ಒಂದು ವಿಷಯವನ್ನು ಪ್ರಸ್ತಾಪ ಮಾಡಬೇಕಾದರೆ ಇದರಲ್ಲಿ ಸತ್ಯ ಯಾವುದು, ಅಸತ್ಯ ಯಾವುದು, ಯಾರು ತಪ್ಪು ಮಾಡಿದ್ದಾರೆ ಅದನ್ನೆಲ್ಲಾ ಚೆನ್ನಾಗಿ ತಿಳಿದುಕೊಂಡು ಹೇಳಬೇಕು. ಈ ತಾಲ್ಲೂಕಿನಲ್ಲಿ ಬಾಪೂಗೌಡರ ೩೦ ವರ್ಷದ ಚರಿತ್ರೆ ಏನು ಇದೆ ಅದನ್ನು ಚೆನ್ನಾಗಿ ತಿಳಿದುಕೊಳ್ಳುವುದಕ್ಕೆ ನಾನು ಮೊದಲೇ ಹೇಳಿದ ಹಾಗೆ ಈ ಸದನದ ಸದಸ್ಯರ ಸಮಿತಿಯೊಂದನ್ನು ಮಾಡಲಿ. ಅದನ್ನು ನಾನು ಎದುರಿಸುವುದಕ್ಕೆ ತಯಾರಾಗಿದ್ದೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಈ ಬಗ್ಗೆ ತನಿಖೆ ಮಾಡುವುದಕ್ಕೆ ಸದನದ ಸದಸ್ಯರ ಸಮಿತಿ ಯೊಂದನ್ನು ಮಾಡುವುದಕ್ಕೆ ನನಗೂ ಒಪ್ಪಿಗೆ ಇದೆ.

ಶ್ರೀ ರಮೇಶ್ ಜಿಗಜಿಣಗಿ.—(ಒಳಾಡಳಿತ ಶಾಖೆಯ ರಾಜ್ಯ ಸಚಿವರು) ೬೮ ನೇ ನಿಯಮದ ಮೇರೆಗೆ ಅಲ್ಪಕಾಲಾವಧಿಯ ಚರ್ಚೆಯ ಮೇಲೆ ಮಾನ್ಯ ಸದಸ್ಯರುಗಳು ಕೊಟ್ಟಂಥಾ ಸೂಚನೆಯ ಬಗ್ಗೆ ನಾನೂ ಒಂದು ಹೇಳಿಕೆಯನ್ನು ನೀಡುತ್ತೇನೆ. ಅದು ಈ ರೀತಿ ಇದೆ.—

ಶ್ರೀ ಸಿದ್ದನಗೌಡ ಬಿನ್ ಬಸವಂತರಾಯ ಯೇವೂರು ಗ್ರಾಮದವಾಸಿ, ಇದೇ ಗ್ರಾಮದ ಬಸ್ ನಿಲ್ದಾಣದಲ್ಲಿ ೬-೯-೮೩ರಂದು ಮುಂಜಾನೆ ೬-೩೦ಕ್ಕೆ ಕೊಲೆಯಾದ ವಿಚಾರದಲ್ಲಿ ಶೋರಾಪುರ ಸರ್ಕಲ್‌ನ ಕೆಂಬಾವಿ ಪೋಲೀಸ್ ಸ್ಟೇಷನ್‌ನಲ್ಲಿ ಅಪರಾಧ ಸಂಖ್ಯೆ ೫೧:೮೩ ಅಂಡರ್ ಸೆಕ್ಷನ್ ೧೪೭, ೧೪೮, ೩೦೨ ರೆಡ್‌ವಿತ್ ೧೪೯ ಐಪಿಸಿ ರೀತ್ಯಾ ಮೊಕದ್ದಮೆಯನ್ನು ನೋಂದಾಯಿಸಿ ಕೊಳ್ಳಲಾಗಿದೆ. ಸ್ಥಳೀಯ ಪೋಲೀಸರು ತನಿಖೆಯನ್ನು ಕೈಗೊಂಡು, ತನಿಖೆ ಮುಂಗಿದು ೬-೨-೮೪ ರಂದು ಆರೋಪಣಾ ಪಟ್ಟಿಯ ಪ್ರಕಾರ ೧ ಗಿಂಡಪ್ಪಗೌಡ ತಂದೆ ಒಂಕರಪ್ಪ ಗೌಡ, ೨ ಬಾಬುಗೌಡ

ತಂದೆ ಶಂಕರಪ್ಪಗೌಡ, ೩ ಭೀಮಣ್ಣಗೌಡ ತಂದೆ ಶಿವಮಂನಪ್ಪಗೌಡ, ೪ ಮಾನಪ್ಪ ಗೌಡ ತಂದೆ ಬಸವಂತರಾಯ ಮೇಥಿ, ೫ ಈರಣ್ಣ ತಂದೆ ಬಸಪ್ಪ ಅಂಗಡಿ ೬ ಗುರುನಾಥರೆಡ್ಡಿ ತಂದೆ ಹನುಮಂತರಾಯ ತಮಟಗಿ, ೭ ರಹಿಮಾನ್‌ಸಾಬ್ ತಂದೆ ಥಾವಲ್‌ಸಾಬ್ ೮ ಹಜಾರಾಸಾಬ್ ಬಿನ್ ಥಾವಲ್ ಸಾಬ್ ೯ ಬಸವಂತರಾಯ ಗೌಡ ತಂದೆ ಸಾಯಪ್ಪಗೌಡ, ಗುಂಡಕೆವಲ್, ೧೦ ಅಕ್ಬರ್‌ಸಾಬ್ ತಂದೆರಹಿಮಾನ್ ಸಾಬ್ ೧೧ ಶರಣಪ್ಪ ತಂದೆ ಬೆಳ್ಳಪ್ಪ ಸಾಗನೂರ, ೧೨ ದೇವೇಂದ್ರಪ್ಪ ತಂದೆ ಚಂದ್ರಾಮಪ್ಪ ಕರ್ನಾಲ್, ೧೩ ಬಾಲಪ್ಪ ತಂದೆ ಬಸಪ್ಪ, ಕರ್ನಾಲ್, ೧೪ ಬನಪ್ಪ ಬಿನ್ ಚಂದ್ರಾಮಪ್ಪ ಕರ್ನಾಲ್ ಇವರು ಅಪಾದಿತರು

೨ ಈ ಮೇಲ್ಕಂಡ ಆಪಾದಿತರು ಅಕ್ರಮ ಕೂಟ ಮಾಡಿಕೊಂಡು ದೊಣ್ಣೆ, ಮಚ್ಚು ಮಂಂತಾದ ಮಾರಕ ಆಯುಧ ದಾರಿಗಳಾಗಿ ಮೃತನ ಮುಖ, ಕುತ್ತಿಗೆ ಹಾಗೂ ದೇಹದ ಮೇಲೆ ಹೊಡೆದು ಆತನಿಗೆ ಮಂರಣಾಂತಕ ಘಾಯಗಳನ್ನು ಮಾಡಿದರು. ಇದರಿಂದಾಗಿ ಸಿದ್ದಣಗೌಡ ಸ್ಥಳದಲ್ಲಿಯೇ ಮೃತನಾದನು ಮೃತನ ಹಾಗೂ ಆಪಾದಿತರ ನಡುವೆ ರಾಜಕೀಯ ಹಾಗೂ ಸ್ವಂತ ವಿಷಯಗಳ ಬಗ್ಗೆ ಇದ್ದ ದ್ವೇಷವೇ ಈ ಕೊಲೆಗೆ ಕಾರಣವೆಂದು ತಿಳಿದುಬಂದಿದೆ. ಈ ಮೊಕದ್ದಮೆ ಬಹಳ ಪ್ರಾಮಂಖ್ಯವೆಂದು ಪರಿಗಣಿಸಿ, ತನಿಖೆಯನ್ನು ಯಾದಗೀರ, ಡಿವೈಎಸ್‌ಪಿ ಇವರಿಗೆ ತಾರೀಖು ೨೧-೧೦-೮೩ ರಂದು ವಹಿಸಲಾಯಿತು. ಡಿ.ಎಸ್.ಪಿ. ಯಾದಗೀರ್‌ರವರು ಈ ಕೆಳಕಂಡ ಆಪಾದಿತರನ್ನು ದಸ್ತಗಿರಿ ಮಾಡಿದ್ದಾರೆ

೧ ಈರಣ್ಣ ತಂದೆ ಬಸಪ್ಪ ಅಂಗಡಿ ೨ ಹಜಾರಸಾಬ್ ೩ ಶರಣಪ್ಪ ತಂದೆ ಬೆಳ್ಳಪ್ಪ ೪ ರಹಿಮಾನ್ ಸಾಬ್ ತಂದೆಥಾವಲ್‌ಸಾಬ್. ೫. ಬಸಪ್ಪ ತಂದೆ ಚಂದ್ರಾಮಪ್ಪ ಕರ್ನಾಲ್. ೬. ದೇವೆಂದ್ರಪ್ಪ ತಂದೆ ಚಂದ್ರಾಮಪ್ಪ ಕರ್ನಾಲ್, ೭ ಬಾಳಪ್ಪ ತಂದೆ ಬಸಪ್ಪ ಕರ್ನಾಲ್, ೮ ಅಕ್ಬರ್‌ಸಾಬ್ ತಂದೆ ರಹಿಮಾನ್‌ಸಾಬ್ ೯ ಗೌಡಪ್ಪಗೌಡ ತಂದೆ ಶಂಕರಪ್ಪ ಗೌಡ, ಎಲ್ಲರೂ ಏಪೂರು ಗ್ರಾಮದ ವಾಸಿಗಳು. ಈ ಅಪರಾಧಿಗಳನ್ನು ನ್ಯಾಯಾಂಗ ಕಸ್ಟಡಿಗೆ ಒಪ್ಪಿಸಲಾಯಿತು

SRI G. P. VODEYARAJ.—This is the same statement, which was made in the Council. They have not found out any fresh things. That shows how inefficient the Government is

MR. SPEAKER.—There cannot be two different statements. If there are two different statements, then, it becomes a privilege matter

ಶ್ರೀ ರವೀಶ್ ಜಿಗಜಿಣಗಿ.—ಅಧ್ಯಕ್ಷರೇ, ನನ್ನ

೨. ಯಾದಗೀರ್ ಡಿ. ಎಸ್. ಪಿ.ಯವರು ಈ ಕೇಸಿನ ತನಿಖೆಯನ್ನು ಮುಂಗಿಸಿ ಶೋರಾಪುರ ನ್ಯಾಯ ದಂಡಾಧಿಕಾರಿಗಳ ಮುಂದೆ ತಾರೀಖು ೬-೨-೮೪ ರಂದು ಆರೋಪಣ ಪಟ್ಟಿಯನ್ನು ಸಲ್ಲಿಸಿದ್ದಾರೆ ಈ ಮೊಕದ್ದಮೆಯು ನ್ಯಾಯಾಲಯದಲ್ಲಿ ವಿಚಾರಣೆಯಲ್ಲಿದೆ

೩ ಈ ವಿಷಯದಲ್ಲಿ ಹಿಂದೆ ಸದನದಲ್ಲಿ ಎತ್ತಲಾಗಿದ್ದು, ಪ್ರಕರಣವನ್ನು ಸಿ.ಒ.ಡಿ. ತನಿಖೆಗೆ ಒಪ್ಪಿಸಲಾಗಿದ್ದು, ಮತ್ತೆ ಅದನ್ನು ಏತಕ್ಕೆ ಸರ್ಕಾರ ಹಿಂದಕ್ಕೆ ತೆಗೆದುಕೊಂಡಿತು ಎಂಬ ಪ್ರಶ್ನೆ ಬಹಳ ಪ್ರಾಮಂಖ್ಯವಾಗಿ ಪ್ರಸ್ತಾಪಿಸಲ್ಪಟ್ಟಿತು. ಸಿ.ಒ.ಡಿ. ಯವರು ತನಿಖೆ ಮಾಡಬೇಕೆಂದು ಮುಖ್ಯ ಮಂತ್ರಿಗಳು ಆದೇಶ ನೀಡಿದುದು ನಿಜ. ಈ ಬಗ್ಗೆ ಸಿ.ಒ.ಡಿ. ಆರಕ್ಷಕ ಮಹಾ ನಿರೀಕ್ಷಕರವರಿಗೆ ಪತ್ರ ಬರೆಯಲಾಯಿತು. ನಂತರ ಸ್ಥಳೀಯ ಪೋಲೀಸರು ತನಿಖೆಯನ್ನು ಪೂರೈಸಿ ಆರೋಪಣಾ ಪಟ್ಟಿಯನ್ನು ನ್ಯಾಯಾಲಯದಲ್ಲಿ ಹಾಕಿರುವ ಹಂತದಲ್ಲಿ ಇದ್ದುದರಿಂದ ಸಿ. ಒ. ಡಿ. ಯಂವರಿಂದ ತನಿಖೆ ಮಾಡುವ ಅಗತ್ಯ ಇಲ್ಲ ಎಂಬ ತೀರ್ಮಾನಕ್ಕೆ ಬರಲಾಯಿತು. ಸಿ.ಒ.ಡಿ.ಗೆ ಒಪ್ಪಿಸಿದ ಹಾಗೂ ಹಿಂತೆಗೆದುಕೊಂಡ ತಾರೀಖಿನ ವಿವರಗಳು ಕೆಳಕಂಡಂತೆ ಇವೆ

(೧) ಮುಂಖ್ಯ ಮಂತ್ರಿಗಳು ಸಿ.ಒ.ಡಿ. ತನಿಖೆ ಮಾಡಬೇಕೆಂದು ಆದೇಶ ನೀಡಿದ ತಾರೀಖು ೨೬-೧೨-೮೯ರಿ.

(೨) ಈ ಬಗ್ಗೆ ವಿಶೇಷ ಆರಕ್ಷಕ ಮಹಾ ನೀರಿಕ್ಷಕರವರಿಗೆ ಪತ್ರ ಬರೆದ ತಾರೀಖು ೩-೧-೮೯

(ಜಿ) ತನಿಖೆ ಮಂಂದುವರಿದು ಪ್ರಕರಣ ಕೊನೆ ಹಂತದಲ್ಲಿ ಇದ್ದುದರಿಂದ ಸಿ.ಒ.ಡಿ. ತನಿಖೆ ಅನಾವಶ್ಯಕವೆಂದು ಮುಖ್ಯ ಮಂತ್ರಿಗಳು ಆದೇಶ ನೀಡಿದ ತಾರೀಖು ೧೬–೧–೮೪

(ಳ) ಗೃಹ ಕಾರ್ಯದರ್ಶಿ ಮುಖ್ಯ ಮಂತ್ರಿಗಳೊಂದಿಗೆ ಈ ವಿಷಯ ಚರ್ಚಿಸಿದ ತಾರೀಖು ೧೬–೧–೮೪

(ಐ) ಮುಖ್ಯ ಮಂತ್ರಿಗಳ ಆದೇಶದ ಮೇರೆಗೆ ಸಿ. ಒ. ಡಿ. ತನಿಖೆ ಅನಗತ್ಯವೆಂದು ವಿಶೇಷ ಆರಕ್ಷಕ ಮಹಾ ನೀರಿಕ್ಷಕರು ಸಿ. ಒ. ಡಿ. ಯವರಿಗೆ ಪತ್ರ ಬರೆದ ತಾರೀಖು ೨೩–೧–೮೪

ಮಾನ್ಯ ಅಧ್ಯಕ್ಷರೇ, ಒಂದು ವಿಚಾರವನ್ನು ಮಾನ್ಯ ಸದಸ್ಯರಿಗೆ ಹೇಳಲಿಕ್ಕೆ ಇಚ್ಛಿಪಡುತ್ತೇನೆ. ಈ ಒಂದು ಘಟನೆಗೆ ಸಂಬಂಧಪಟ್ಟಂತೆ ಆರೋಪಣಾ ಪಟ್ಟಿಯನ್ನು ಸರ್ಕಾರ ನ್ಯಾಯಾಲಯದ ಮುಂದಿಡಲಾಗಿದೆ ವಿಷಯ ಸದನದಲ್ಲಿ ಚರ್ಚೆಯಾಗುವುದರಿಂದ ಸಬ್‌ಜ್ಯುಡೀಸ್ ಆಗಬಹುದು ಎನ್ನುವುದು ನನ್ನ ಅಭಿಪ್ರಾಯಂ ತಾವು ಹೆಚ್ಚಿನ ಚರ್ಚೆಗೆ ಅವಕಾಶ ಕೊಡಬಾರದು ಎಂದು ನಾವು ಕೇಳಿಕೊಳ್ಳುತ್ತೇನೆ. ಸಿ.ಆರ್.ಪಿ.ಸಿ. ಸೆಕ್ಷನ್ ೧೬೩ ಸಬ್ ಸೆಕ್ಷನ್ ೮ರ ಪ್ರಕಾರ ಮತ್ತೊಮ್ಮೆ ವಿಚಾರಣೆ ಮಾಡಬೇಕೆಂದು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ. ಕಾಯಿದೆ ಪ್ರಕಾರ ಫೈಷ್ ಎನ್‌ಕ್ವೈರಿ ಮಾಡಲಿಕ್ಕೆ ಅವಕಾಶ ಇಲ್ಲ. ಈ ವಿಚಾರದಲ್ಲಿ ಯಾರೊಬ್ಬರಿಗೂ ಸಹಾಯ ಮಾಡುವ ಉದ್ದೇಶವಾಗಲೀ, ತಪ್ಪಿತಸ್ಥರನ್ನು ಬಚ್ಚಿಡಬೇಕೆಂಬ ಉದ್ದೇಶವಾಗಲೀ ಈ ಸರ್ಕಾರಕ್ಕೆ ಇಲ್ಲವೆಂದು ಸ್ಪಷ್ಟವಾಗಿ ಹೇಳುತ್ತೇನೆ. ಮಾನ್ಯ ಸದಸ್ಯರಿಗೆ ತಮ್ಮ ಮಂಖಾಂತರ ಅರಿಕೆ ಮಾಡಿಕೊಳ್ಳುತ್ತೇನೆ. ಎನ್‌ಕ್ವೈರಿ ಮಾಡುವುದು ಬೇಡ. ಡಾಕ್ಯುಮೆಂಟರಿ ಎವಿಡೆನ್ಸ್ ಕೊಡ ಬೇಕಾದರೆ ಸೆಷನ್ ಎನ್‌ಕ್ವೈರಿ ಆಫೀಸರ್ ಹತ್ತಿರ ಹೇಳಿಕೆ ಕೊಡಲಿ. ಅದನ್ನು ಕೋರ್ಟಿಗೆ ಕಳಂಹಿಸಿಕೊಡುತ್ತೇನೆಂದು ಹೇಳುವುದಕ್ಕೆ ಇಚ್ಛಿಪಡುತ್ತೇನೆ.

ಶ್ರೀ ವಿ. ಎಸ್. ಆಚಾರ್ಯ.—ಸ್ವಾಮಿ...

ಅಧ್ಯಕ್ಷರು.—೧೬೩ರ ವಿಷಯದ ಮೇಲೆ ಮತ್ತೆ ಉತ್ತರ ಕೊಡುವುದಕ್ಕೆ ಅವಕಾಶ ಇಲ್ಲ.

ಶ್ರೀ ವಿ. ಎಸ್. ಆಚಾರ್ಯ.—ಇಡೀ ವಿಷಯಂ ವಿಚಾರಣೆ ಅಂತಿಮ ಹಂತದಲ್ಲಿದ್ದು. ೧೬–೧–೮೪ರಳಿಕ್ಕೆ ಚಾರ್ಜ್‌ಷೀಟ್ ಹಾಕಿ, ಸಿ.ಒ.ಡಿ. ತನಿಖೆ ಆರ್ಡರನ್ನು ವಾಪಸ್ಸು ತೆಗೆದುಕೊಂಡಿದ್ದಾರೆ.

ಶ್ರೀ ಹೆಚ್. ಗಂಗಾಧರ್.—ಮಾನ್ಯ ಮುಖ್ಯಮಂತ್ರಿಯವರಿಗೆ ಮಾಡಿದಂಥ ಅವಮಾನ. ಅವರ ಕೆಲಸಕ್ಕೆ ಮಸಿ ಬಳಿಯತಕ್ಕಂಥಾದ್ದು ನಡೆದಿದೆ. ಆರ್ಡರ್ ಮಾಡಿದ ಮೇಲೆ ವಾಪಸ್ಸು ತೆಗೆದಂ ಕೊಳ್ಳುವುದಕ್ಕೆ ರಿಪೋರ್ಟ್ ಕೊಟ್ಟವರಂ ಯಾರು ? ಅದಕ್ಕೆ ಆಧಾರ ಇದೆಯೆ ? ಬಾಪೂಗೌಡರ ಬಗ್ಗೆ ವ್ಯಕ್ತಿಶಃ ದ್ವೇಷ ಇಲ್ಲ. ಇವತ್ತು ಸರ್ಕಾರ ನಡೆಸುವವರ ಮೇಲೆ ಆ ಗೌರವ ಬಂದಿದೆ.

ಶ್ರೀ ಬಾಪೂಗೌಡ ದರ್ಶನಾಪೂರ.—ಬರೀ ವ್ಯಾಮೋಹ...

ಶ್ರೀ ವಿ. ಎಸ್. ಆಚಾರ್ಯ.—೧೯೭೫ರಲ್ಲಿ ಕೋರ್ಟಿನ ಮುಂದೆ ಚಾರ್ಜ್‌ಷೀಟ್ ಸಲ್ಲಿಸಿದಮೇಲೆ ದೇವರಾಜಅರಸು ರವರು ಸಿ.ಒ.ಡಿ. ತನಿಖೆಗೆ ಹಾಕಬೇಕೆಂದು ಹೇಳಿದ್ದರು

ಅಧ್ಯಕ್ಷರು.—ನೀವೆ ಹೀಗೆ ಮಾಡಿದರೆ ಹೇಗೆ ?

ಶ್ರೀ ಬಿ. ಎಸ್. ಯಡಿಯೂರಪ್ಪ.—ಸ್ವಾಮಿ, ಸಿ.ಒ.ಡಿ. ತನಿಖೆಯಾಗಬೇಕೆಂದು ನಾವು ಕೇಳಲಿಲ್ಲ, ಮಂತ್ರಿ ವಿಶ್ವನಾಥ ರೆಡ್ಡಿ ಮುದ್ನಾಳ್‌ರವರೇ ಕೇಳಿದ್ದರು.

ಶ್ರೀ ಎಂ. ವೀರಪ್ಪ ಮೊಯ್ಲಿ.—ಗುಲ್ಬರ್ಗ ಜಿಲ್ಲೆಗೆ ಸಂಬಂಧಪಟ್ಟಂತೆ ಗೃಹ ಇಲಾಖೆಯನ್ನು ವಿಶ್ವನಾಥರೆಡ್ಡಿ ಮುದ್ನಾಳ್‌ರವರೇ ನಡೆಸುತ್ತಿರೋ, ರಾಮಕೃಷ್ಣ ಹೆಗಡೆಯವರು ನಡೆಸುತ್ತಿದ್ದಾರೋ ಗೊತ್ತಿಲ್ಲ.

ಅಧ್ಯಕ್ಷರು.—ಉತ್ತರ ಕೊಡಬೇಕೆಂದು ಎಲ್ಲಿದೆ ?

ಶ್ರೀ ಕೆ. ಎಚ್. ರಂಗನಾಥ್.—ಮಾನ್ಯ ಮುಖ್ಯಮಂತ್ರಿಯವರು ಸಿ ಒ. ಡಿ. ತನಿಖೆಗೆ ಆರ್ಡರ್ ಮಾಡಿದ್ದನ್ನು ವಾಪಸ್ಸು ತೆಗೆದುಕೊಳ್ಳುವುದಕ್ಕೆ ವಿಶ್ವನಾಥರೆಡ್ಡಿ ಮುದ್ನಾಳ್‌ರವರು ಕಾರಣರು ಎಂದು ಮಾನ್ಯ ಸದಸ್ಯರಾದ ಯಡಿಯೂರಪ್ಪನವರು ಹೇಳಿದ್ದಾರೆ. ಮಾನ್ಯ ಮುಖ್ಯಮಂತ್ರಿಯವರು ವಿತಕ್ಕೆ ಹೀಗೆ ಮಾಡಿದರು. ಅದು ಸದನಕ್ಕೆ ಗೊತ್ತಾಗಬೇಕು.

ಅಧ್ಯಕ್ಷರು.—ನಾನು ಏನು ಮಾಡಬೇಕು ?

ಶ್ರೀ ಕೆ. ಎಚ್. ರಂಗನಾಥ್.—ರಾಮಕೃಷ್ಣ ಹೆಗಡೆಯವರು ತಾವು ಮಾಡಿರುವುದು ಸರಿಯೇ ಅಲ್ಲವೇ ಎನ್ನುವುದನ್ನು ಸದನಕ್ಕೆ ತಿಳಿಸಬೇಕು. ಎರಡೂ ವಿಷಯಗಳು ಸರಿಯಾಗಿದ್ದರೆ ಖಾತೆಯನ್ನು ಕೈಬಿಡಬೇಕು. ರಾಜೀನಾಮೆ ಕೊಡಬೇಕು. ಇದು ಅಷ್ಟು ಸುಲಭವಾದ ಪ್ರಶ್ನೆಯಲ್ಲ.

ಅಧ್ಯಕ್ಷರು.—ನಿಯಮಾವಳಿಗಳಲ್ಲಿ ಎಲ್ಲರೂ ಮಾತನಾಡಬೇಕೆಂದರೆ ಹೇಗೆ ?

(INTERRURTION)

ಶ್ರೀ ಕೆ. ಹೆಚ್. ರಂಗನಾಥ್.—ಮಾನ್ಯ ಅಧ್ಯಕ್ಷರೇ, ವಿಷಯಕ್ಕೆ ಸಂಬಂಧಪಟ್ಟ ಹಾಗೆ ಹೊಸ ವಿಷಯಗಳು ಉದ್ಭವವಾಗಿದೆ, ಮುಖ್ಯಮಂತ್ರಿಗಳ ಕರ್ತವ್ಯ ನಮಗೆ ಅನುಮಾನಕ್ಕೆ ಎಡೆಮಾಡಿದೆ. ಅಪನಂಬಿಕೆಗೆ ಒಳಗಾಗಿದ್ದಾರೆ.

(ಗೊಂದಲ)

SRI K. H. RANGANATH.—But, the fact is, the Government has not denied it. The Hon. Minister was mentioning the dates the C.O.D. enquiry was ordered.

(INTERRUPTION)

ಅಧ್ಯಕ್ಷರು.—ಮಾನ್ಯ ಮಂತ್ರಿಗಳು ಹೇಳಲಿ.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಸಭಾಪತಿಗಳೇ, ಪ್ರಥಮದಲ್ಲಿಯೇ ನಾನು ಒಂದು ವಿಧಿಬಿಂದುವನ್ನು ಎತ್ತಲಿಕ್ಕೆ ಪ್ರಯತ್ನ ಮಾಡಿದೆ.

ಶ್ರೀ ಎಂ. ವೀರಪ್ಪಮೊಯ್ಲಿ.—ಮಾನ್ಯ ಮುಖ್ಯಮಂತ್ರಿಯುವರ ವಿಧಿ ಹೇಳಿ,

ಶ್ರೀ ಎಸ್. ಆರ್. ಬೊಮ್ಮಾಯಿ.—ನಿಮ್ಮ ವಿಧಿ ನಮಗೆ ಗೊತ್ತಿದೆ.

ಶ್ರೀ ಎಂ. ವೀರಪ್ಪಮೊಯ್ಲಿ.—ಕರ್ನಾಟಕದ ವಿಧಿ ಹೀಗಾಯಿತಲ್ಲ.

(ಗೊಂದಲ)

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಅಧ್ಯಕ್ಷರೇ ನಾನು ೧೪ನೇ ತಾರೀಖಿನ ವಿಧಿ ಬಿಂದುವಿನ ಮೂಲಕ.....

ಶ್ರೀ ಎಂ. ವೀರಪ್ಪಮೊಯ್ಲಿ.—ನಿಮ್ಮ ಮುಖ್ಯಮಂತ್ರಿಗಳವರ ವಿಧಿ ಚೆನ್ನಾಗಿಲ್ಲವೆಂದು ಹೇಳಿ...

ಶ್ರೀ ಎಸ್. ಆರ್. ಬೊಮ್ಮಾಯಿ.—ನಿಮ್ಮ ವಿಧಿ ಗೊತ್ತಿದೆ. ನಮ್ಮ ವಿಧಿ ಏನಾಗಿದೆ ಎಂಬುದು ನಿಮಗೆ ಗೊತ್ತಿದೆ. ನಮ್ಮ ಮುಖ್ಯಮಂತ್ರಿಗಳವರ ವಿಧಿ ಬಗ್ಗೆ ಏತಕ್ಕೆ ಹೇಳುತ್ತೀರಿ ದಯವಿಟ್ಟು ಸ್ವಲ್ಪ ಕೇಳಿ...

(ಗೊಂದಲ)

ಶ್ರೀ ಎಂ. ವೀರಪ್ಪಮೊಯ್ಲಿ.—ಕರ್ನಾಟಕ ರಾಜ್ಯದ ಜನತೆಗೆ ಗೊತ್ತಾಗಿದೆ...

ಶ್ರೀ ಎಸ್. ಆರ್. ಬೊಮ್ಮಾಯಿ.—ಶ್ರೀ ವೀರಪ್ಪಮೊಯ್ಲಿಯವರ ವಿಧಿ ಏನಾಗಿದೆ ಎಂಬುದು ಎಲ್ಲರಿಗೂ ಗೊತ್ತಿದೆ ಬಿಡಿ...

(ಗೊಂದಲ)

ಒಬ್ಬ ಮಾನ್ಯ ಸದಸ್ಯರು.—ಪಂಜಾಬ್‌ನಲ್ಲಿ ದಿನ ಮರ್ಡರ್ ಕೊಲೆಯಾಗುತ್ತಿದೆ...

(ಗೊಂದಲ)

ಶ್ರೀ ಎಸ್. ಆರ್. ಬೊಮ್ಮಾಯಿ.—ಪಂಜಾಬ್‌ನಲ್ಲಿ ದಿನ ಬೆಳಗಾದರೆ ಕೊಲೆಯಾಗುತ್ತಿರುವಾಗ ಪ್ರಧಾನ ಮಂತ್ರಿಗಳವರು ರಾಜೀನಾಮೆ ಕೊಡುತ್ತಿಲ್ಲ, ಆಂಧ್ರಾದ್ದರಲ್ಲಿ ಈ ಘಟನೆಯ ಬಗ್ಗೆ ನಮ್ಮ ಮುಖ್ಯಮಂತ್ರಿಗಳವರು ರಾಜೀನಾಮೆ ಕೊಡಬೇಕು.

(ಗೊಂದಲ)

ಶ್ರೀ ಧರ್ಮಸಿಂಗ್ ನಾರಾಯಣಸಿಂಗ್.—ನಾಚಿಕೆ ಬರಬೇಕಂ ಈ ಸರ್ಕಾರಕ್ಕೆ.

ಶ್ರೀ ಎ. ಲಕ್ಷ್ಮಿಸಾಗರ್.—ನಿವಂಗೆ ನಾಚಿಕೆ ಬರಬೇಕು. ಪಂಜಾಬ್‌ನಲ್ಲಿ ಕೊಲೆಯಾಗುತ್ತಿವೆ, ದಿನ ನಿತ್ಯ ಕೊಲೆಗಳಾಗುತ್ತಿವೆ...

(ಗೊಂದಲ)

ಶ್ರೀ ಎ. ಲಕ್ಷ್ಮಿಸಾಗರ್.—ಪಂಜಾಬ್‌ನಲ್ಲಿ ವಿಸಂ ನಡೆಯುತ್ತಿದೆ ಎಂಬುದಕ್ಕೆ ಉತ್ತರ ಹೇಳಿ...

ಅಧ್ಯಕ್ಷರು.—ಆರ್ಡರ್ ಪ್ಲೀಜ್... ಸಂಜೆ ಆಗುತ್ತಿದ್ದ ಹಾಗೆ ಟೆಂಪರ್ ಜಾಸ್ತಿಯಾಗುತ್ತಿದೆಯಲ್ಲಾ ಏತಕ್ಕೆ ? ರಿಪ್ಲೈ ಮಾಡುವುದಕ್ಕೆ ನೀವು ಬಿಡದಿದ್ದರೆ ನಾನು ಕೆಲವೊಂದು ಅನೌನ್ಸ್‌ಮೆಂಟ್ ಮಾಡ ಬೇಕಾಗಿದೆ ಅದನ್ನು ಮಾಡುತ್ತೇವೆ...

ಶ್ರೀ ಧರ್ಮಸಿಂಗ್ ನಾರಾಯಣಸಿಂಗ್,—ರಾತ್ರಿ ಎಲ್ಲಾ ಪೋಲೀಸಿನವರಂ ಹೊಡೆಯುತ್ತಿದ್ದಾರೆ ಪೋಲೀಸಿನವರು ಸಾಯಿಸುತ್ತಿದ್ದಾರೆ...

ಅಧ್ಯಕ್ಷರು.—ಸ್ವಲ್ಪ ಉತ್ತರವನ್ನು ಹೇಳುವುದಕ್ಕೆ ಅವಕಾಶ ಮಾಡಿ ಕೊಡಿ ..

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಹಿರಿಯ ಸದಸ್ಯರಾದ ಶ್ರೀ ಕೆ. ಹೆಚ್. ರಂಗ ನಾಥ್‌ರವರು...

(ಗೊಂದಲ)

ಶ್ರೀ ಎಂ. ವೀರಪ್ಪಮೊಯ್ಲಿ.—ದಪ್ಪ ಚರ್ಮ ಜಾಸ್ತಿಯಾಗಿದೆ. ನಿಮ್ಮದು ದಪ್ಪ ಚರ್ಮ...

ಶ್ರೀ ಎಸ್. ಆರ್. ಬೊಮ್ಮಾಯಿ.—ದೆಹಲಿಯಲ್ಲಿರುವವರದು ದಪ್ಪ ಚರ್ಮ ನಮ್ಮದು ದಪ್ಪ ಚರ್ಮ ಆಗುತ್ತಿಲ್ಲ. ಮಾನ್ಯ ಮುಖ್ಯಮಂತ್ರಿಗಳವರು ಸಿಓಡಿ ವಿಚಾರಣೆ ಮಾಡಲಂ ಆಜ್ಞೆ ಮಾಡಿದ್ದರು ಆಮೇಲೆ ಅದನ್ನು ಹಿಂದಕ್ಕೆ ತೆಗೆದುಕೊಂಡರು. ಅದರ ಬಗ್ಗೆ ದಿನಾಂಕ ಎಲ್ಲಾ ಕೊಟ್ಟಿದ್ದಾರೆ. ಆ ಮೇಲೆ ಒಂದು ರೆಪ್ರಜೆಂಟೇಷನ್ ಬಂದ ಮೇಲೆ ಮುಖ್ಯಮಂತ್ರಿಗಳವರು ಇದರಲ್ಲಿ ಸಿಓಡಿಯಿಂದ ತನಿಖೆ ಮಾಡುವುದು ಅವಶ್ಯಕತೆ ಇದೆ ಎಂದು ಕಂಡು ಬಂದ ಮೇಲೆ ಸಿಓಡಿಗೆ ಆಜ್ಞೆ ಮಾಡಿದ್ದಾರೆ. ಆ ಆಜ್ಞೆ ಗುಲ್ಬರ್ಗ ಪೋಲೀಸ್ ಅಧಿಕಾರಿಗಳಿಗೆ ಮುಟ್ಟುವುದಕ್ಕೆ ಮೊದಲೇ ವಿಚಾರಣೆ ಮುಗಿದುಹೋಗಿ ಚಾರ್ಜ್ ಶೀಟ್ ಹಾಕಿದ್ದರು.

(ಗೊಂದಲ)

ಶ್ರೀ ಗೋವಿಂದ ಪಿ. ಒಡೆಯರಾಜ್.—ನಿಮ್ಮ ಸ್ಟೇಟ್‌ಮೆಂಟ್ ಪ್ರಕಾರ ಏನೇ ತಾರೀಖು ಎಂದು ಹೇಳಿದ್ದೀರಿ.

ಶ್ರೀ ಎಸ್. ಆರ್. ಬೊಮ್ಮಾಯಿ.—ಏನೇ ತಾರೀಖು ಹಾಕಿದ್ದಾರೆ.

ಒಬ್ಬ ಮಾನ್ಯ ಸದಸ್ಯರಂ.—ಹಾಕತಕ್ಕ ಪ್ರಸಂಗ ಬಂದಿತ್ತು.

ಶ್ರೀ ವಿ. ಎಸ್. ಆಚಾರ್ಯ.—ಹಾಕುವ ಹಂತದಲ್ಲಿದ್ದರು.

ಶ್ರೀ ಎಸ್. ಆರ್. ಬೊಮ್ಮಾಯಿ.—ಇಲ್ಲಿ ಆಜ್ಞೆ ಆದ ಮೇಲೆ ಅದು ಗುಲ್ಬರ್ಗ ಅಧಿಕಾರಿಗಳಿಗೆ ಮುಟ್ಟುವುದಕ್ಕೆ ಮೊದಲೇ ಎವಿಡೆನ್ಸ್ ರಿಕಾರ್ಡ್ ಆಗಿ ಚಾರ್ಜ್‌ಶೀಟ್ ಹಾಕತಕ್ಕ ಹಂತದಲ್ಲಿತ್ತು. ಆ ಕಾರಣದಿಂದ ವಿಚಾರಣೆ ಮುಂಕ್ತಾಯವಾಗುವ ಹಂತದಲ್ಲಿತ್ತು ಎನ್ನುವ ಕಾರಣದಿಂದ, ಪೋಲೀಸ್ ಅಧಿಕಾರಿಗಳು ಅದಂ ಮುಂಕ್ತಾಯ ಹಂತದಲ್ಲಿದೆ ಎನ್ನುವ ಕಾರಣದಿಂದ ವಾಪಸ್ಸು ತೆಗೆದುಕೊಂಡಿದ್ದಾರೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಮಾನ್ಯ ಮುಖ್ಯಮಂತ್ರಿಗಳವರು ಸಿಓಡಿ ತನಿಖೆಗೆ ಆದೇಶ ಕೊಡಬೇಕಾಗಿದ್ದರೆ ವಿನಾದರೂ ರಿಕಾರ್ಡ್ ತರಿಸಿಕೊಂಡಿದ್ದರೆ ? ತನಿಖೆಯಂ ಕಾರ್ಯ ಮುಂಕ್ತಾಯ ಹಂತದಲ್ಲಿದ್ದರೆ ಸಿಓಡಿ ತನಿಖೆಗೆ ಏತಕ್ಕೆ ಆದೇಶವನ್ನು ಕೊಟ್ಟರು ?

ಶ್ರೀ ವಿ. ಎಸ್. ಆಚಾರ್ಯ.—ಸಿಓಡಿ ತನಿಖೆಯಿಂದ ಸತ್ಯಾಂಶ ಹೊರಗಡೆ ಬರಲಿ, ಅಪರಾಧಿ ಗಳಂ ಯಾರಿದ್ದಾರೆ ಅವರನ್ನು ಬುಕ್ ಮಾಡಿ. ನಿರಪರಾಧಿಗಳಿಗೆ ತೊಂದರೆಯಾಗಬಾರದೆಂದು ಹೇಳಂ

ತ್ತೇನೆ. ಸರ್ಕಾರ ಯಾವುದೇ ಒತ್ತಡಕ್ಕೆ ಮಣಿಯುವುದಿಲ್ಲವೆಂದು ಹೇಳುವಾಗ ಸಿಓಡಿ ತನಿಖೆ ಮಾಡಲು ಏತಕ್ಕೆ ಹಿಂಜರಿಯುತ್ತಿದ್ದಾರೆ ? ಇದರಲ್ಲಿ ಏನಿದೆ ? ಇದರಿಂದ ಸಂತಯ ಬಲವಾಗಿ ಬೆಳೆಯುಂತ್ತಿದೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಇನ್‌ವೆಸ್ಟಿಗೇಷನ್ ಕೊನೇ ಹಂತದಲ್ಲಿದ್ದುದರಿಂದ ಮಂಖ್ಯಮಂತ್ರಿಗಳವರು ಸಿಓಡಿ ತನಿಖೆಗೆ ಮಾಡಿದ ಆಜ್ಞೆಯನ್ನು ವಾಪಸ್ಸು ತೆಗೆದು ಕೊಂಡಿದ್ದಾರೆ. ಈಗ ಆ ವಿಚಾರ ಕೋರ್ಟ್‌ನ ವಂಂದಿದೆ. ಚಾರ್ಜ್ ಶೀಟ್ ಹಾಕಿದ್ದಾರೆ. ಮಾನ್ಯ ಡಾ. ಆಚಾರ್ಯರವರು ಹಿಂದೆ ೧೯೭೫ ರಲ್ಲಿ ದೇವರಾಜ್ ಅರಸ್‌ರವರು ಚಾರ್ಜ್‌ಶೀಟ್ ಹಾಕಿದ ಮೇಲೆ ಪುನಃ ಸಿಓಡಿಗೆ ಆಜ್ಞೆ ಮಾಡಿರತಕ್ಕ ಉದಾಹರಣೆಯನ್ನು ಹೇಳುತ್ತಿದ್ದಾರೆ. ನೀವು ಕ್ರಿಮಿನಲ್ ಪ್ರೊಸೀಜರ್ ಕೋಡ್ ೧೭೩ರಲ್ಲಿ ಹೇಳಿರತಕ್ಕದ್ದನ್ನು ನೋಡಿದಾಗ ಗೊತ್ತಾಗುತ್ತದೆ. There must be fresh evidence.

ಶ್ರೀ ವಿ. ಎಸ್, ಆಚಾರ್ಯ.—ಕೊಲೆಯಾದ ಪ್ರದೇಶದಲ್ಲಿ ಎಲ್ಲಾ ಬದಲಾವಣೆಯಾಗಿದೆ. ನಿಮಗೆ ಈಗ ಹೊಸದಾಗಿ ಎಲ್ಲಿ ಫ್ರೆಶ್ ಎವಿಡೆನ್ಸ್ ಸಿಗುತ್ತದೆಯೇ ? ಸಿಓಡಿ ತನಿಖೆಯಾದರೆ ಮಾತ್ರ ಫ್ರೆಶ್ ಎವಿಡೆನ್ಸ್ ಸಿಗುತ್ತದೆ ಇಲ್ಲದಿದ್ದರೆ ಇಲ್ಲ.

ಶ್ರೀ ಎಸ್. ಆರ್. ಬೊಮ್ಮಾಯಿ.—ಚಾರ್ಜ್ ಶೀಟ್ ವಾಪಸ್ಸು ತೆಗೆದುಕೊಳ್ಳಬೇಕಾಗಿದ್ದರೆ ಫ್ರೆಶ್ ಎವಿಡೆನ್ಸ್, ಫ್ರೆಶ್ ಗ್ರೌಂಡ್ಸ್ ಬೇಕಾಗುತ್ತದೆಂದು ಅರಿಕೆ ಮಾಡಿಕೊಳ್ಳುತ್ತಿದ್ದೇನೆ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಎಲ್ಲಿಂದ ಬರಬೇಕು ?

ಶ್ರೀ ಎಸ್. ಆರ್. ಬೊಮ್ಮಾಯಿ.—ಅನೇಕ ಸಲ ಬರುತ್ತದೆ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಸಿಓಡಿ ತನಿಖೆಗೆ ಫ್ರೆಶ್ ಎವಿಡೆನ್ಸ್ ಬರುತ್ತದೆಂದು ಜವ ಮಾಡಿ ಕೊಂಡು ಕೂತರೆ ಬರುತ್ತದೆಯೇ ?

(ಗೊಂದಲ)

ಶ್ರೀ ಎಸ್. ಆರ್. ಬೊಮ್ಮಾಯಿ.—ಲೀಗಲಿ ಮಂಖ್ಯಮಂತ್ರಿಗಳವರು ಯಾವುದೇ ತಪ್ಪನ್ನು ಮಾಡಿಲ್ಲ. ರಾಜಕೀಯಂವಾಗಿ ಯಾವುದೇ ಒತ್ತಡಕ್ಕೆ ಒಳಗಾಗಿಲ್ಲ. ಆದುದರಿಂದ ಸಿಓಡಿ ತನಿಖೆ ಮಾಡತಕ್ಕ ಅವಶ್ಯಕತೆ ಇಲ್ಲ.

ಶ್ರೀ ವಿ. ಎಸ್. ಆಚಾರ್ಯ.—ಸಿಓಡಿ ತನಿಖೆ ಮಾಡಲು ಸರ್ಕಾರದವರು ಒಪ್ಪದೇ ಇರುವುದರಿಂದ ನಾವುಗಳು ಸಭಾತ್ಯಾಗ ಮಾಡುತ್ತಿದ್ದೇವೆ.

(ಬಿ.ಜೆ.ಪಿ. ಪಕ್ಷದ ಸದಸ್ಯರು ಸಭಾತ್ಯಾಗವನ್ನು ಮಾಡಿದರು)